
ಶಿವಜ್ಞಾನಿ ಶರಣ

ಸೊಡ್ಡಳ ಬಾಚರಸರು



ಶ್ರೀಮತಿ ಜಯಶ್ರೀ ಸುಕಾಲೆ

ಶಿವಜ್ಞಾನಿ ಶರಣ
ಸೊಡ್ಡಳ ಬಾಚರಸರು

ಅನುಭವ ಮಂಟಪ ಶರಣ ಚರಿತಾಮೃತ ಮಾಲಿಕೆ-೩೨ (೨೦೨೨)

ಶಿವಜ್ಞಾನಿ ಶರಣ

ಸೊಡ್ಡಳ ಬಾಚರಸರು

ಲೇಖಕರು
ಶ್ರೀಮತಿ ಜಯಶ್ರೀ ಸುಕಾಲೆ
ಬೀದರ್

ಪ್ರಕಾಶಕರು
ಪ್ರಸಾರಾಂಗ, ಲಿಂಗಾಯತ ವಿಶ್ವವಿದ್ಯಾಲಯ
ಅನುಭವ ಮಂಟಪ-ಬಸವಕಲ್ಯಾಣ. ಜಿಲ್ಲೆ-ಬೀದರ

SHIVAJNANI SHARANA SODDALA BACHARASARU :

Written by	:	Shrimati Jayashree Sukale,
Publisher	:	Prasaranga, Lingayat Vishwavidyalaya, Anubhava Mantapa, Basavakalyana, Dist: Bidar Karnataka State
First Edition	:	2022
©	:	Publisher
Copies	:	1,000
Pages	:	viii + 52 = 60
Price	:	**Rs. 40/-**
Book Size	:	Crown 1/8
Paper Used	:	70 GSM NS Maplitho

ಶಿವಜ್ಞಾನಿ ಶರಣ ಸೊಡ್ಡಳ ಬಾಚರಸರು

ಲೇಖಕರು	:	ಶ್ರೀಮತಿ ಜಯಶ್ರೀ ಸುಕಾಲೆ
ಪ್ರಕಾಶಕರು	:	ಪ್ರಸಾರಾಂಗ, ಲಿಂಗಾಯತ ವಿಶ್ವವಿದ್ಯಾಲಯ, ಅನುಭವಮಂಟಪ, ಬಸವಕಲ್ಯಾಣ ಜಿ: ಬೀದರ, ಕರ್ನಾಟಕ
ಮುದ್ರಣ	:	೨೦೨೨
©	:	ಪ್ರಕಾಶಕರು
ಪ್ರತಿಗಳು	:	೧,೦೦೦
ಪುಟಗಳು	:	viii + ೫೨ = ೬೦
ಬೆಲೆ	:	ರೂ. ೪೦/-
ಪುಸ್ತಕದ ಆಕಾರ	:	ಕ್ರೌನ್ ೧/೮
ಬಳಸಿದ ಕಾಗದ	:	೭೦ ಜಿ.ಎಸ್.ಎಮ್. ಎನ್.ಎಸ್. ಮ್ಯಾಪಲಿಥೊ

ಮುದ್ರಕರು :

ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ವಿಠ್ಠಲ ಮಂದಿರ ರೋಡ, ಗದಗ – 582 101
Email : chaitanyaoffset@gmail.com
Mobile : 9448223602, 9481523602, 8884495331

ಪ್ರಕಾಶಕರ ನುಡಿ

೧೨ನೆಯ ಶತಮಾನದ ಅನುಭವ ಮಂಟಪ, ಅದರ ಕರ್ತೃ ಬಸವಣ್ಣನವರು. ನೂತನ ಅನುಭವ ಮಂಟಪದ ರೂವಾರಿಗಳು ಭಾಲ್ಕಿ ಹಿರೇಮಠದ ಡಾ.ಚನ್ನಬಸವ ಪಟ್ಟದ್ದೇವರು. ಬಸವಾದಿ ಶರಣರ ಮಣಿಹ ಹೊತ್ತ ಪೂಜ್ಯರು, ಜನಪರ, ಜೀವಪರ ಕಾಳಜಿಗಳೊಂದಿಗೆ ವೈಚಾರಿಕ ನೆಲೆಯಲ್ಲಿ ಸಾಂಸ್ಕೃತಿಕ ಕೆಲಸ ಕಾರ್ಯಗಳನ್ನು ಜೊತೆಯಲ್ಲಿಯೇ ಪೂರೈಸುತ್ತಿದ್ದರು. ಅದರ ಭಾಗವಾಗಿಯೇ ಕಲೆ, ಸಮಾಜ, ಸಂಸ್ಕೃತಿ ಮತ್ತು ಸಾಹಿತ್ಯದ ಅಧ್ಯಯನ ಪ್ರಸಾರ ಪ್ರಕಟಣೆಗಳು ಈಗಲೂ ಜರುಗುತ್ತವೆ.

೨೦೧೪ರ ಬಸವ ಜಯಂತಿ ಸಂದರ್ಭದಲ್ಲಿ ವಿಶ್ವಬಸವಧರ್ಮ ಟ್ರಸ್ಟ್ ಅನುಭವ ಮಂಟಪ ಬಸವಕಲ್ಯಾಣದ ಅಧ್ಯಕ್ಷರಾಗಿ ಪೂಜ್ಯ ಡಾ.ಬಸವಲಿಂಗ ಪಟ್ಟದ್ದೇವರು ಅಧಿಕಾರ ವಹಿಸಿಕೊಂಡರು. ಅನುಭವ ಮಂಟಪದಲ್ಲಿ ನಿತ್ಯ ಜ್ಞಾನದಾಸೋಹ ವ್ಯವಸ್ಥಿತವಾಗಿ ನಡೆಯಬೇಕೆಂಬ ಉದ್ದೇಶದಿಂದ ಆ ಕಾರ್ಯ ಆರಂಭಿಸಿದರು. ಜೊತೆಗೆ ಸಾಹಿತ್ಯ ಕೃತಿಗಳನ್ನು ಪ್ರಕಟಿಸಲು ಪ್ರಕಾಶನ ಸಂಸ್ಥೆಯನ್ನು ತೆರೆಯಲು ಯೋಜನೆ ರೂಪಿಸಿದರು. ಇದಕ್ಕೆ ಮುಖ್ಯ ಕಾರಣವೆಂದರೆ, ಆಧುನಿಕತೆಯ ಭರಾಟೆಯಲ್ಲಿ "ಪುಸ್ತಕ ಸಂಸ್ಕೃತಿ" ಮಾಯವಾಗುತ್ತಿದೆ. ಅದನ್ನು ಉಳಿಸಿಕೊಳ್ಳಬೇಕೆಂಬ ಬಲವಾದ ಆಶಯ ಅವರದು. ಪುಸ್ತಕ ಪ್ರೇಮಿಗಳೆಲ್ಲರ ಆಶಯವು ಇದೆ ಆಗಿದೆ. ಪುಸ್ತಕವೆಂದರೆ ಕೇವಲ ಹಾಳೆಗಳ ಕಟ್ಟಲ್ಲ. ನಮ್ಮ ಸಾಂಸ್ಕೃತಿಕ ಲೋಕವನ್ನು ಬೆಸೆಯುವ, ನಮ್ಮ ಜ್ಞಾನದ ಪರಿಧಿಯನ್ನು ವಿಸ್ತರಿಸುವ ವಾಹಕ ಅದಾಗಿದೆ. ಮೂಲ ಲೇಖಕನೊಂದಿಗೆ ನಡೆಸುವ ಸಂವಾದವೂ ಅದು ಆಗಿರುತ್ತದೆ. ಜೊತೆಗೆ ಸಮಕಾಲೀನ ಬದುಕಿನ ಅನೇಕ ಆಯಾಮಗಳನ್ನು ಕಟ್ಟಿಕೊಡುವ ಸರಕಾಗಿರುತ್ತದೆ. ಶ್ರೀಗಳ ಆಶಯದಂತೆ ಶರಣರ ಶುದ್ಧ ಚಾರಿತ್ರಿಕ ಜೀವನ ಜನಸಾಮಾನ್ಯರಿಗೂ ತಿಳಿಯಬೇಕೆಂಬ ಹೆಬ್ಬಯಕೆಯಿಂದ ೨೦೧೬ರಲ್ಲಿ 'ಅನುಭವ ಮಂಟಪ ಶರಣ ಚರಿತಾಮೃತ ಮಾಲಿಕೆ'ಯನ್ನು ರೂಪಿಸಿಕೊಂಡು,

ಅದರ ಹೆಸರಿನಲ್ಲಿ ೬೪ ಪುಟದ ವ್ಯಾಪ್ತಿಯ ಶರಣ ಸಾಹಿತ್ಯ ಕುರಿತಾದ ಮೌಲಿಕ ಕೃತಿಗಳನ್ನು ಹೊರತರುವ ಇಚ್ಛೆ ಹೊಂದಲಾಗಿದೆ.

ಈಗಾಗಲೇ ಇದರಡಿಯಲ್ಲಿ ೩೬ ಶರಣರ ಚರಿತ್ರೆಗಳನ್ನು ಹೊರತರಲಾಗಿದ್ದು, ಈಗ ಶರಣೆ ಅಕ್ಕಮ್ಮಾ, ಶರಣ ಸೊಡ್ಡಳ ಬಾಚರಸ ಮತ್ತು ಶರಣ ವೈದ್ಯ ಸಂಗಣ್ಣ ಎಂಬ ಕೃತಿಗಳನ್ನು ಈ ಹಂತದಲ್ಲಿ ಲೋಕಾರ್ಪಣೆ ಮಾಡಲು ಸಂತೋಷವೆನಿಸುತ್ತದೆ. ಈ ಪುಸ್ತಕಗಳನ್ನು ಬರೆದ ಲೇಖಕರಿಗೆ ಅನಂತ ಶರಣಾರ್ಥಿಗಳು.

–ಪ್ರಕಾಶಕರು

ಪರಿವಿಡಿ

■■

ಶಿವಜ್ಞಾನಿ
ಶರಣ ಸೊಡ್ಡಳ ಬಾಚರಸರು

ಪೀಠಿಕೆ

ಕರ್ನಾಟಕದ ಸಾಂಸ್ಕೃತಿಕ ಜೀವನದಲ್ಲಿ ಹೊಸ ಮೌಲ್ಯಗಳ ಆವಿಷ್ಕಾರಕ್ಕೆ ಬಸವಣ್ಣನವರು ಹಾಗೂ ಸಮಕಾಲೀನ ಶರಣರ ಬರವು ಒಂದು ಐತಿಹಾಸಿಕ ಸತ್ಯಕ್ಕೆ ಅನುವು ಮಾಡಿಕೊಟ್ಟ ಅತ್ಯದ್ಭುತ ಸಂಗತಿಯಾಗಿದೆ. ಕಲ್ಯಾಣದಲ್ಲಿ ಬಸವಣ್ಣನವರಿಂದ ನಿರ್ಮಿತವಾದ 'ಅನುಭವಮಂಟಪ'ವೆಂಬ ಆಧ್ಯಾತ್ಮಿಕ ಸಂಸ್ಥೆಯು ಶರಣರ ತಾತ್ವಿಕ, ಸಾತ್ವಿಕ ಜಿಜ್ಞಾಸೆಗೆ ಅಪೂರ್ವ ಚಾಲನೆಯನ್ನೊದಗಿಸಿತು. ಶರಣರ ಜೀವನ ದರ್ಶನದ ಅಭಿವ್ಯಕ್ತಿಗೆ ಅವರು ದರ್ಶಿಸಿದ ಜೀವನ ಮೌಲ್ಯಗಳು ಜಿಜ್ಞಾಸೆಗೆ ಒಳಪಟ್ಟು ಸ್ಥಿರಗೊಳ್ಳಲು ಅದೊಂದು ಮಹತ್ವದ ವೇದಿಕೆಯಾಯಿತು. ಆಧ್ಯಾತ್ಮಿಕ ಸಂಘಟನಾ ಸಂಸ್ಥೆಯಾಗಿ ಅನುಭವ ಮಂಟಪವು ಬಸವಾದಿ ಶರಣರ ಸಾಧನೆಗಳನ್ನು ತೀವ್ರಗತಿಯಲ್ಲಿ ಕ್ರಿಯಾಶೀಲಗೊಳಿಸುವ ಮಹತ್ವದ ಮಾಧ್ಯಮವಾಯಿತು. ಶರಣರ ಸಾಧನೆಗಳ ಕಡೆಗೆ ಇಡೀ ವಿಶ್ವವೇ ನೋಡುವಂತಾಯಿತು. ಬಸವಾದಿ ಶರಣರು ಕೇವಲ ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನಷ್ಟೇ ಪರಿವರ್ತಿಸಲಿಲ್ಲ ; ಅದರ ಮೂಲಕ ಒಟ್ಟು ವಿಶ್ವದ ಸಾಂಸ್ಕೃತಿಕ ಮುನ್ನಡೆಗೆ ಮಾರ್ಗದರ್ಶಿಯಾದರು. ಶರಣರು ಮೂಲತಃ ಮಾನವತಾವಾದಿಗಳು. ಅವರು ಮನುಷ್ಯನ ಪ್ರಕೃತಿ ಧರ್ಮವನ್ನು ಚೆನ್ನಾಗಿ ಬಲ್ಲವರು. ಮಾನವನ

ಗುಣ ಸ್ವಭಾವ, ಮಾನಸಿಕ ಸ್ಥಿತಿಯನ್ನು ಆಳವಾಗಿ ಪರಿಶೀಲಿಸಿದರು. ಸಾಮಾಜಿಕ ಧರ್ಮದ ಸ್ವರೂಪವನ್ನು ಅರಿತವರು. ವ್ಯಷ್ಟಿ ಮತ್ತು ಸಮಷ್ಟಿಯ ಅಂತರಸಂಬಂಧವನ್ನು ಅರಿಯುವಂಥ ಅನುಭಾವ ದರ್ಶನವನ್ನು ಮಾಡಿಸಿದರು.

ಹೊರಲೋಕದ ಅನುಭವ ಮತ್ತು ಒಳಲೋಕದ ಅರಿವಿನ ಮೂಲಕ ಅನುಭಾವ ದರ್ಶನವನ್ನು ಕಂಡುಹಿಡಿದು ಜಗತ್ತಿಗೆ ನೀಡಿದ ಕೀರ್ತಿ ಶರಣರಿಗೆ ಸಲ್ಲುತ್ತದೆ. ಮಾನವಕುಲದ ಹಿತದಲ್ಲಿ ಆಸಕ್ತಿಯುಳ್ಳವರಾಗಿದ್ದರಿಂದಲೇ ಮಾನವನ ಜೀವನದ ಅಭಿವೃದ್ಧಿಗೆ ಸಾಧಕವಾಗುವಂತಹ ಸಾಮಾಜಿಕ ಧರ್ಮವನ್ನು ರೂಪಿಸುವಲ್ಲಿ ಯಶಸ್ಸನ್ನು ಸಾಧಿಸಿದರು. ಅಲ್ಲದೇ ಮಾನವನ ಜೀವನದ ವಿಕಾಸಕ್ಕೆ ಬೇಕಾಗುವ ವಿವಿಧ ಬಗೆಯ ಸಾಮಾಜಿಕ ಪರಿಸರದ ಪ್ರಭಾವವು ಎಷ್ಟರ ಮಟ್ಟಿಗೆ ಆಗುವುದೆಂಬುದನ್ನು ಮನಗಂಡು ಆ ಪರಿಸರವನ್ನು ಸಮಾಜಮುಖಿಯಾಗಿ ಮಾನವೀಯಗೊಳಿಸುವಲ್ಲಿ ತಲ್ಲೀನರಾದರು. ಮಾನವಕುಲವು ಅಭಿವೃದ್ಧಿಯತ್ತ ಸಾಗುವಂತೆ ಮಾಡಿದ ಶರಣರ ಜೀವನದ ಐತಿಹಾಸಿಕ ಸಾಧನೆಯಾಗಿದೆ. ಅವರ ಅರಿವು, ಆಚಾರ ಮತ್ತು ಕಾಯಕಪ್ರಜ್ಞೆ ಎಲ್ಲ ಕಾಲಕ್ಕೂ ಹೊಸತನದಿಂದ ಕೂಡಿದ್ದು ಸರ್ವರ ಮನಸೂರೆಗೊಳ್ಳುತ್ತವೆ.

ಭರತಖಂಡದ ವಿವಿಧ ಮೂಲೆಗಳಿಂದ ಮಾರ್ಗಗಳು ಮೂಡಿಬಂದು ಕಲ್ಯಾಣವನ್ನು ತಲುಪಿದವು. ಕಾಶ್ಮೀರ, ಮಾಳವ, ಆಂಧ್ರ, ಕಂದಹಾರ ಮುಂತಾದ ಸ್ಥಳಗಳಿಂದ ಆಗಮಿಸಿದ ರಾಜರು, ಸೈನಿಕರು, ಬಡವರು, ಶ್ರೀಮಂತರು, ವಿದ್ವಾಂಸರು, ಕಲಾವಿದರು, ದಾರ್ಶನಿಕರು, ಅನುಭಾವಿಗಳಾಗಿ, ಕಾಯಕದ ಮೂಲಕ ಪ್ರಕೃತಿಯ ರಹಸ್ಯವನ್ನೂ ಬದುಕಿನ ಅರ್ಥವನ್ನೂ ಕಂಡುಕೊಂಡರು. ಎಲ್ಲ ರಂಗಗಳಲ್ಲಿಯೂ ಶರಣರ ವಚನ ಚಳವಳಿ ಹೊಸತನ್ನೇ ಸಾಧಿಸಿತು. ಸಮಾಜದ ಎಲ್ಲ ಕ್ಷೇತ್ರಗಳಲ್ಲಿಯೂ ಬದಲಾವಣೆಗೆ ಕಾರಣವಾಯಿತು.

ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವವರೇ ಶರಣರು. ಮಾನವನು ಸಮಸ್ಯೆಗಳಿಗೆ ಸಿಕ್ಕಿ ಕಂಗೆಟ್ಟಾಗ ಶರಣರ ಜೀವಕಾರುಣ್ಯದ ವಚನಗಳು

ದಾರಿತೋರುತ್ತವೆ. ಸದ್ಭಾವನೆಯನ್ನು ಬೆಳೆಸಿಕೊಂಡು ಸರ್ವರ ಒಳಿತನ್ನು ಬಯಸುವವರೇ ಕುಲಜರು ಎಂದು ಹೇಳಿದ ಶರಣರು ಹುಟ್ಟಿನ ಮೂಲದ ಕುಲಶ್ರೇಷ್ಠತೆಯನ್ನು ಅಲ್ಲಗಳೆದರು. ವರ್ಗ, ವರ್ಣ, ಜಾತಿ, ಲಿಂಗಭೇದವನ್ನು ತಿರಸ್ಕರಿಸಿದ ಶರಣರ ಉದಾತ್ತ ವಿಚಾರಗಳು ಅಂದಿಗೆ ಮಾತ್ರವಲ್ಲ, ಎಂದೆಂದಿಗೂ ಪ್ರಸ್ತುತವಾಗಿವೆ. ಇದೇ ಶರಣರ ನಿತ್ಯನೂತನವಾದ ಚಿಂತನಾ ಕ್ರಮವಾಗಿದೆ.

ಬಸವಾದಿ ಶರಣರು ಅನಾದಿಕಾಲದಿಂದಲೂ ನಡೆದುಬಂದ ಜಾತಿ, ಮತ, ಪಂಥ–ಪಂಗಡಗಳನ್ನು ಮೆಟ್ಟಿ ನಿಂತರು. 'ದೇವರು' ಎನ್ನುವ ಪರಿಕಲ್ಪನೆಯನ್ನು ಮನುಷ್ಯನ ಬದುಕಿಗೆ ಅನ್ವಯವಾಗುವಂತೆ ವಿವರಿಸಿದರು. ತಮ್ಮ ವಚನಗಳಲ್ಲಿ ದೇವರ ಹಲವಾರು ಲಕ್ಷಣಗಳನ್ನು ಅವರು ಹೇಳಿದರೂ ಅವೆಲ್ಲವನ್ನೂ ಮನುಷ್ಯನಲ್ಲಿಯೇ ಗುರುತಿಸುವ ಪ್ರಯತ್ನ ಮಾಡಿದರು. ನಿಜಮಾನವರ ಬದುಕಿನ ರೀತಿಯಲ್ಲೇ ದೇವರ ಅಸ್ತಿತ್ವ ಕಾಣಲು ಸಾಧ್ಯ ಎಂದು ಪ್ರತಿಪಾದಿಸಿದರು. ದೇವರು ಆಕಾಶದಲ್ಲಿರುವನೋ ಕೈಲಾಸದಲ್ಲಿರುವನೋ ಹಿಮಾಲಯದಲ್ಲೋ ಇನ್ನೂ ಎಲ್ಲೆಲ್ಲೋ ಎಂದು ಹುಡುಕಾಡಬೇಡಿ, ತನ್ನೊಳಗಿರುವ ದೇವರನ್ನು ಅರಿಯಬೇಕೆಂಬ ಅರಿವು ಮೂಡಿಸಿದರು. 'ನಾ ದೇವನಲ್ಲದೆ ನೀ ದೇವನೆ' ಎಂದು ಪ್ರಶ್ನಿಸುವ ಮೂಲಕ ಮಾನವನ ಜೀವನದ ಮಹತ್ವ ಸಾರಿದರು. ಜೀವನ ಮೌಲ್ಯಗಳಾದ ಪ್ರೀತಿ, ವಿಶ್ವಾಸ, ಘನತೆ, ಸ್ವಾತಂತ್ರ್ಯ, ಸಹಕಾರ ಮತ್ತು ಸಮಾನತೆಯಿಂದ ಕೂಡಿದ ಮಾನವತಾವಾದದ ಹೊಸ ನೆಲೆಗಟ್ಟಿನ ಮೇಲೆ ಹೊಸ ಧರ್ಮವನ್ನು ಸ್ಥಾಪಿಸಿದರು. ಶರಣರು ಸದಾಕಾಲಕ್ಕೂ ಸರ್ವಜನಕ್ಕೆ ಶ್ರೇಯಸ್ಕರವಾದ ಜೀವನಮೌಲ್ಯಗಳನ್ನು ನಡೆ ನುಡಿ ಸಿದ್ಧಾಂತದ ಮೂಲಕ ಸಾರಿದರು.

ಕಡೆಗಣಿಸಲಾಗದಂಥ ಮಹತ್ವದ ಸಾಮಾಜಿಕ ಕಾರ್ಯ ಭೂಮಿಕೆಯನ್ನು ನಿರ್ವಹಿಸಿದ ಕಾಯಕಜೀವಿಗಳಾದ ಸೊಡ್ಡಳ ಬಾಚರಸರು ಬಸವಣ್ಣನವರ ಹಿರಿಯ ಸಮಕಾಲೀನರು. ಅರಿವಿನ ಪಥದ ಶರಣ ಸಹಯಾತ್ರಿಗಳಲ್ಲಿ ಸಮಾನರಾಗಿ ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿದವರು.

ಉಗ್ರಾಣದ ಅಧಿಕಾರಿ ಸೊಡ್ಡಳ ಬಾಚರಸರು

ಸೊಡ್ಡಳ ಬಾಚರಸರು ಹುಟ್ಟಿದ ಊರು, ತಂದೆ-ತಾಯಿ, ಅವರು ಕಳೆದ ಬಾಲ್ಯ, ಪಡೆದ ವಿದ್ಯಾಭ್ಯಾಸ, ವಿವಾಹಿತರಾಗಿದ್ದರೆ ಅವರ ಹೆಂಡತಿ, ಮಕ್ಕಳು ಮೊದಲಾದ ಜೀವನ ಚರಿತ್ರೆಯ ಅಂಶಗಳು ಸಿಕ್ಕಿಲ್ಲ ಸೋಮೇಶ್ವರನ ಭಕ್ತರಾಗಿದ್ದರಿಂದ ಗುಜರಾತಿನ ಸೌರಾಷ್ಟ್ರದಿಂದ ಕಲ್ಯಾಣಕ್ಕೆ ಬಂದು ಬಿಜ್ಜಳನ ಉಗ್ರಾಣದಲ್ಲಿ ಕರಣಿಕ ಕಾಯಕ ಕೈಗೊಂಡಿರಬಹುದು.

ಬೇರೆ ಬೇರೆ ವಚನಕಾರರು ಅವರನ್ನು ಕುರಿತು ಹೇಳಿದ ವಚನಗಳಲ್ಲಾಗಲಿ ಅಥವಾ ಬಾಚರಸರೇ ರಚಿಸಿದ ವಚನಗಳಲ್ಲಾಗಲಿ ಅವರ ಜೀವನಚರಿತ್ರೆಯ ಎಳೆಗಳು ಸಿಗುವುದಿಲ್ಲ. ತನ್ನ ಕಾಯಕ ಕುರಿತು ಹೇಳಿರುವ ವಚನಗಳು ಸಹ ಅಷ್ಟೊಂದು ಕಾಣುವುದಿಲ್ಲ. ಆದರೆ ಲಿಂಗಾಂಗಸಾಮರಸ್ಯದ ಸಾಧನೆಯಲ್ಲಿ ಬಾಚರಸರು ಪರಿಣತರಾಗಿದ್ದರು ಎಂಬುದು ಅವರ ಕೆಲವು ವಚನಗಳಿಂದ ವ್ಯಕ್ತವಾಗುತ್ತದೆ.

ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪದ ೭೭೦ ಅಮರಗಣಂಗಳಲ್ಲಿ ಅವರೂ ಒಬ್ಬರಾಗಿದ್ದರು. ಅನುಭವ ಮಂಟಪದ ಚಿಂತನ ಮಂಥನದಲ್ಲಿ ಭಾಗವಹಿಸುವ ಮೂಲಕ ವೈದಿಕ ವ್ಯವಸ್ಥೆಯ ಅಸಮಾನತೆಯನ್ನು ಅಲ್ಲಗಳೆದು ವೈಚಾರಿಕ ಪ್ರಖರತೆಯ ವಚನಗಳ ರಚನೆ ಮಾಡಿದರು.

ಕರಣಿಕ ಸೊಡ್ಡಳ ಬಾಚರಸರು ಅನುಭವ ಮಂಟಪದಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸುತ್ತಿದ್ದರು. ರಕ್ತಸಂಬಂಧದ ಮೋಹ ಆಣವಮಲ, ಜಾತಿ ಧರ್ಮ ಸಂಬಂಧದ ಮೋಹ ಮಾಯಾಮಲ, ಧನದಾಹ ಎಂಬುದು ಕಾರ್ಮಿಕಮಲ. ಇವುಗಳಿಗೆ ಮಲತ್ರಯಗಳೆಂದು ಕರೆಯುತ್ತಾರೆ. ಇಂಥ ಮಲತ್ರಯಗಳಿಂದ ದೂರವಾದ ಬಾಚರಸರು ಅಂತರಂಗ-ಬಹಿರಂಗ ಶುದ್ಧಿಯನ್ನು ಪಡೆದು ಲಿಂಗಾಂಗ ಸಾಮರಸ್ಯದ ಸುಖ ಪಡೆದುಕೊಂಡಂಥವರು. ಆ ಸುಖದ ಸವಿಯನ್ನು ತಮ್ಮ ವಚನಗಳಲ್ಲಿ ತುಂಬಿದ ಸೊಡ್ಡಳ ಬಾಚರಸರು 'ದೇವರಾಯ', 'ಏಕಾಂತವೀರ',

'ಮಹಾದಾನಿ' ಎನ್ನುತ್ತಾ ಕೊನೆಗೆ ಸೊಡ್ಡಳಾ ಎಂದೇ ಬರುವ ವಚನಾಂಕಿತದಿಂದ ರಚಿಸಿದ ೧೦೪ ವಚನಗಳು ಲಭ್ಯವಾಗಿವೆ. ಅವರ ವಚನಗಳು ಜೀವನ ನಿಷ್ಠೆ, ನೀತಿಬೋಧೆ, ದೈವಭಕ್ತಿ, ಮತ್ತು ಶಿವಾನುಭವ ದಿಂದ ಕೂಡಿದವುಗಳಾಗಿವೆ. ವೈದಿಕತೆಯ ಮೌಢ್ಯವನ್ನು ಅಲ್ಲಗಳೆಯುತ್ತಾ ರಚಿಸಿರುವ ವಚನಗಳು ವೈಚಾರಿಕತೆಯಿಂದ ಓದುಗರ ಮನದಲ್ಲಿ ಹೊಳೆಯ ತೊಡಗುತ್ತವೆ.

ಸೊಡ್ಡಳ ಬಾಚರಸರು ಬಸವಣ್ಣನವರಿಗೆ ಬಹಳ ಹತ್ತಿರದವರಾಗಿ ಬಾಳಿ ಬೆಳಗಿದವರಲ್ಲಿ ಒಬ್ಬರಾಗಿದ್ದವರು. ಬಾಚರಸರು ಬಿಜ್ಜಳರಾಜನ ಅರಮನೆಯ ಉಗ್ರಾಣದಲ್ಲಿ ಕೆಲಸಗಾರರಿಗೆ ಧಾನ್ಯಗಳನ್ನು ಅಳೆದು ಕೊಡುವುದು ಮತ್ತು ಕೊಟ್ಟುದರ ಲೆಕ್ಕ ಬರೆದಿಡುವ ಕಾಯಕ ನಿರ್ವಹಿಸುತ್ತಿದ್ದರು.

ಸೊಡ್ಡಳ ಬಾಚರಸರು ಸೌರಾಷ್ಟ್ರ ಸೋಮೇಶ್ವರನ ಪರಮ ಭಕ್ತನಾಗಿದ್ದವರು. ಪ್ರತಿವರ್ಷ ಶಿವರಾತ್ರಿಗೆ ಸೋಮೇಶ್ವರನ ದರ್ಶನಕ್ಕೆ ಹೋಗಿ ಬರುವುದು ರೂಢಿಯಾಗಿತ್ತು. ಆಗಿನ ಕಾಲದಲ್ಲಿ ಕಲ್ಯಾಣದಿಂದ ಸೌರಾಷ್ಟ್ರಕ್ಕೆ ಹೋಗಿ ಬರಲು ಸಾಕಷ್ಟು ಸಮಯ ಬೇಕಾಗುತ್ತಿತ್ತು. ಬಾಚರಸರು ವರ್ಷಕ್ಕೊಮ್ಮೆ ಹೆಚ್ಚಿನ ಸಮಯ ಸೌರಾಷ್ಟ್ರಕ್ಕೆ ಹೋಗಿ ಬರುವುದರಲ್ಲಿಯೇ ಕಳೆಯುತ್ತಾರೆ ಎಂಬ ಸಂಶಯ ಮೂಡಿದಾಗ ಬಿಜ್ಜಳರಾಜ ಬೇಸರ ವ್ಯಕ್ತಪಡಿಸಿದ. ಶಿವರಾತ್ರಿ ಸಮೀಪಿಸುತ್ತಿದ್ದಂತೆ ಬಾಚರಸರಿಗೆ ಸೋಮೇಶ್ವರನ ದರ್ಶನ ಪಡೆಯಬೇಕೆಂಬ ಹಂಬಲವಾಯಿತು. ಬಾಚರಸರು ತಮ್ಮ ಬಿನ್ನಹವನ್ನು ರಾಜನಿಗೆ ತಿಳಿಸಿದರು. ಆದರೆ ಬಿಜ್ಜಳರಸ ಯಾವುದೋ ಮಾತಿನ ಭರದಲ್ಲಿ 'ಆ ಸೋಮನಾಥನನ್ನೇ ಇಲ್ಲಿಗೆ ಕರೆಯಿಸಿ ಬಿಡು; ನಾವೂ ದರ್ಶನ ಮಾಡಿಕೊಳ್ಳುತ್ತೇವೆ' ಎಂದು ನುಡಿದುಬಿಟ್ಟ.

ಶಿವಜ್ಞಾನಿ ಸೊಡ್ಡಳ ಬಾಚರಸರು ತಮ್ಮ ಶಿವಭಕ್ತಿಯ ಬಲದಿಂದ ಬಿಜ್ಜಳನ ಮಾತನ್ನು ಸಾಧ್ಯವಾಗಿಸಿದರು, ಸಿದ್ಧರಾಮೇಶ್ವರರು ಶ್ರೀಶೈಲ ಮಲ್ಲಿಕಾರ್ಜುನನನ್ನು ಸೊನ್ನಲಾಪುರಕ್ಕೆ ಬರಿಸಿಕೊಂಡಂತೆ, ಶರಣ

ಆದಯ್ಯನವರು ಸೋಮನಾಥನನ್ನು ಪುಲಿಗೆರೆಗೆ ಬರಿಸಿಕೊಂಡಂತೆ ಸೊಡ್ಡಳ ಬಾಚರಸರು ಶಿವಭಕ್ತಿಯಿಂದ ಸೌರಾಷ್ಟ್ರದ ಸೋಮನಾಥನನ್ನೇ ಕರೆಯಿಸಿಕೊಂಡರು. ಕಲ್ಯಾಣದಲ್ಲಿ ಬಿಜ್ಜಳನ ಅರಮನೆಯ ಆವರಣದಲ್ಲಿ ಸೋಮನಾಥನ ದೇವಸ್ಥಾನವೊಂದು ಸಿದ್ಧಪಡಿಸಿ, ಗರ್ಭಗುಡಿಯೊಳಗೆ ಸ್ಥಾಪಿಸಿದ ಸ್ಥಾವರ ಶಿವಲಿಂಗಕ್ಕೆ 'ಕೊಟ್ಟಾರದ (ಉಗ್ರಾಣದ) ಸೋಮನಾಥ' ಎಂದು ಹೆಸರಿಟ್ಟು ಕರೆಯಲಾಯಿತು.

"ಮಗನೆ ಸೊಡ್ಡಳ ಬಾಚ
ಯ್ಯಗಳ ವಾದ ನಿಮಿತ್ತ
ಬಗೆವೆಚ್ಚಿ ಸೌರಾಷ್ಟ್ರದಿಂದ.
ಸೊಗಸೊಗೆವಂತೆ ಬಂ
ದೊಗೆದೆ ಕೊಠಾರದೊಳ್,
ಜಗವೆಲ್ಲವಿದು ಚೋದ್ಯವೆನಲು."

ಭಕ್ತರು ಶಿವನನ್ನು ಹುಡುಕುತ್ತಾ ಹೋಗುವುದು ಸಹಜವಾದ ಸಂಗತಿಯಾಗಿದೆ. ಆದರೆ ಇಲ್ಲಿ ಶಿವನೇ ಭಕ್ತನನ್ನು ಅರಸುತ್ತಾ ಕಲ್ಯಾಣಕ್ಕೆ ಬಂದಿರುವುದು ಸೊಡ್ಡಳ ಬಾಚರಸರ ಪರಿಶುದ್ಧ ನಿಶ್ಚಲ ಭಕ್ತಿಯ ಕುರುಹಾಗಿದೆ. ಈ ದಂತಕಥೆಯ ವರ್ಣನೆ ಭೀಮಕವಿಯ "ಬಸವ ಪುರಾಣ"ದಲ್ಲಿ ಸವಿಸ್ತಾರವಾಗಿದೆ. ಬಸವಪುರಾಣದ ೫೨ನೇ ಸಂಧಿಯಲ್ಲಿ ೭೫ ಷಟ್ಪದಿ ಪದ್ಯಗಳಿವೆ. ೫೩ನೇ ಸಂಧಿಯಲ್ಲಿ ೮೭ ಪದ್ಯಗಳಿವೆ.

ಬಸವ ಪುರಾಣದಲ್ಲಿ ಸೊಡ್ಡಳ ಬಾಚರಸರ ಕಥೆಯ ಸಾರಾಂಶ ಹೀಗಿದೆ: ಸೊಡ್ಡಳ ಬಾಚರಸ ಬಿಜ್ಜಳನ ಉಗ್ರಾಣದಲ್ಲಿ ಅಧಿಕಾರಿಯಾಗಿದ್ದ. ಪರವಾದಿ ಭಯಂಕರನಾದ ಆತ ಪ್ರತಿವರ್ಷ ಸೌರಾಷ್ಟ್ರಕ್ಕೆ ಹೋಗಿ ಶಿವರಾತ್ರಿ ಆಚರಿಸುವ ನೇಮ ಹಿಡಿದಿದ್ದ. ಒಮ್ಮೆ ಅರಸನು ಆತನಿಗೆ ಬಿಡುವು ಕೊಡಲಿಲ್ಲ. 'ನಿಮಗೇನು ಮಹಂತರಿಗೆ ಸೋಮೇಶ್ವರನನ್ನೇ ಇದ್ದಲ್ಲಿಗೆಬರಿಸಿಕೊಳ್ಳಿರಿ' ಎಂದು ವ್ಯಂಗವಾಡಿದ. 'ತಾವು ಹೇಳಿದ ಹಾಗೆಯೆ ಆದೀತು' ಎಂದ ಬಾಚರಸ.

ಶಿವರಾತ್ರಿಯ ಮುನ್ನಾ ದಿನ ಶಿವನು ಪಡಿಹಾರಿಯ ವೇಷದಿಂದ ಬಂದು ಒಂದು ಪತ್ರವನ್ನು ಬಾಚರಸನಿಗೆ ಕೊಟ್ಟ. 'ನಾಳೆ ಶಿವರಾತ್ರಿ. ಸೋಮೇಶ್ವರ ಬರುತ್ತಿದ್ದಾನೆ. ಉಗ್ರಾಣದ ಬಾಗಿಲು ತೆರೆದಿಟ್ಟುಕೊ' ಎಂದು ತಿಳಿಸಿ ಹೋದ.

ಮರುದಿನ ಬಾಚರಸ ಭಾವಪೂರ್ಣನಾಗಿ ಎದುರು ನೋಡುತ್ತಿದ್ದ. ಬಸವಣ್ಣನವರು, ಇತರ ಶರಣರು ಮತ್ತು ಕಲ್ಯಾಣದ ಜನ ಸೇರಿದ್ದರು. ಪಂಚವಾದ್ಯಗಳು ಮೊಳಗುತ್ತಿದ್ದವು. ಸೌರಾಷ್ಟ್ರ ಸೋಮೇಶ್ವರ ಬೃಹತ್ತಾದ ಧಾನ್ಯದ ರಾಶಿಯಿಂದ ಆವಿರ್ಭವಿಸಿದ. ಬಿಜ್ಜಳ ಬೆರಗಾಗಿ ಬಾಚರಸನಿಗೆ ನಮಿಸಿದ. ಬಾಚರಸ ಅಲ್ಲಿಯೆ ಶಿವರಾತ್ರಿ ನೇಮ ಸಲ್ಲಿಸಿದ. ಶಿವ ಕೊಟ್ಟಾರದ ಸೋಮೇಶ್ವರ ಎಂದು ಪ್ರಸಿದ್ಧನಾದ.

ಈ ಘಟನೆಯ ನಂತರ ಬಿಜ್ಜಳ ಮತ್ತು ಪರವಾದಿಗಳು ಸೇರಿ ಪ್ರತಾಪ ನಾರಾಯಣಪುರದಲ್ಲಿ ಗೋವಿಂದ ದೇವಾಲಯ ನಿರ್ಮಿಸಿದರು. ಆ ಉತ್ಸವಕ್ಕೆ ಬಾಚರಸರು ಹೋಗಲಿಲ್ಲ. ಏಕೆ ಬರಲಿಲ್ಲ ಎಂದು ಬಿಜ್ಜಳ ಬಸವಣ್ಣನವರನ್ನು ಕೇಳಿದ. ಸೇವೆಯಲ್ಲಿ ತಪ್ಪಿದರೆ, ಯುದ್ಧದಲ್ಲಿ ಓಡಿದರೆ ತಪ್ಪು. ಅನ್ಯ ದೇವರಲ್ಲಿಗೆ ಹೋಗದಿದ್ದರೆ ತಪ್ಪೆ? ಎಂದು ಬಸವಣ್ಣನವರು ಕೇಳುತ್ತಾರೆ. ರಾಜನಿಷ್ಠೆ ಬೇರೆ, ದೈವ ನಿಷ್ಠೆ ಬೇರೆ ಎಂಬುದರ ಬಗ್ಗೆ ಬಾಚರಸರಿಗೆ ಸ್ಪಷ್ಟ ಕಲ್ಪನೆ ಇತ್ತು. ಪ್ರಜಾಪ್ರಭುತ್ವದ ಪರಿಪೂರ್ಣ ಕಲ್ಪನೆಯಿದ್ದ ಬಸವಣ್ಣನವರು ಬಾಚರಸರ ವ್ಯಕ್ತಿತ್ವವನ್ನು ಸರಿಯಾಗಿ ಗುರುತಿಸಿದ್ದಾರೆ. ದೇವರು ವೈಯಕ್ತಿಕ ಗೋವಿಂದ ದೇವಾಲಯಕ್ಕೆ ಬರುವುದು ಬಾಚರಸರ ಕಾಯಕದ ಭಾಗವಲ್ಲ ಆದ್ದರಿಂದ ಅವರು ಬರಲಿಲ್ಲ.

'ಭೈರವೇಶ್ವರ ಕಾವ್ಯ', 'ಸಿಂಗಿರಾಜ ಪುರಾಣ', 'ರಾಘವಾಂಕ ಚರಿತೆ' ಮೊದಲಾದ ಕೃತಿಗಳಲ್ಲಿ ಸೊಡ್ಡಳ ಬಾಚರಸರಿಗೆ ಸಂಬಂಧಿಸಿದ ಇನ್ನೂ ಹಲವಾರು ಪ್ರಸಂಗಗಳು ದಂತಕಥೆಗಳ ರೂಪದಲ್ಲಿ ಉಲ್ಲೇಖವಾಗಿವೆ.

ಶರಣ ಸೊಡ್ಡಳ ಬಾಚರಸರ ಕಾಯಕದ ಮಹಿಮೆಯ ವೈಶಿಷ್ಟ್ಯವೇನೆಂದರೆ ಅವರು ಲೆಕ್ಕ ಬರೆಯುವ ರೀತಿ:

ಕಂದುಗೊರಳನ ಭಕ್ತಿಯಂ ಮಾಡುತಾರರಿಯ ಲೆಕ್ಕವನು ಬರೆದ ತೆರನಂತೆಂದೆನೆ ತಂದದ್ದು ತಾರದ್ದು ಓಂ ನಮಃ ಶಿವಯೆಂದು, ಬಂದದ್ದು ಬಾರದ್ದು ಓಂ ನಮಃ ಶಿವಯೆಂದು, ಸಂದದ್ದು ಸಲ್ಲದ್ದು ಓಂ ನಮಃ ಶಿವಯೆಂದು ಬರೆದ ನೀತೆರದೊಳೆಲ್ಲ.

ಅರಮನೆಯ ಯೋಧರಿರಲಿ, ಸೇವಕರಿರಲಿ ಬರುವ ಸಮೂಹಕ್ಕೆ ಧಾನ್ಯವನ್ನು ಬಾಚರಸರು ಅಳೆದುಕೊಡುವಾಗ ಅವರ ಹೆಸರನ್ನೆಲ್ಲ ಪುಸ್ತಕದಲ್ಲಿ ಬರೆಯದೆ ಪಂಚಾಕ್ಷರೀ ಮಂತ್ರವನ್ನೇ ಬರೆಯುತ್ತಿದ್ದರು. ಅವರ ಕಾಯಕ ನಿಷ್ಠೆ ಬಿಜ್ಜಳನಿಗೆ ಬಹಳ ಹಿಡಿಸಿತ್ತು. ಬಾಚರಸರ ಬಗ್ಗೆ ಬಿಜ್ಜಳ ಅಪಾರ ಗೌರವ ಹೊಂದಿದ್ದ. ಆದರೆ ಹೊಟ್ಟೆಕಿಚ್ಚಿನ ಗುಪ್ತಚರರೂ ಚಾಡಿಕೋರರೂ ಆಗಿರುವ ಕೊಂಡೆಯರಿಗೆ ಇದನ್ನು ಸಹಿಸಲಿಕ್ಕಾಗಲಿಲ್ಲ. ಹೇಗಾದರೂ ಮಾಡಿ ಉಭಯರ ನಡುವೆ ಭೇದ ಕಲ್ಪಿಸುವ ಪ್ರಯತ್ನ ಮಾಡುತ್ತಾ ಹೊಂಚು ಹಾಕುತ್ತಿದ್ದರು.

ಒಂದು ದಿನ ಕೊಂಡೆಯರು ಸಮಯ ಸಾಧಿಸಿ ಬಿಜ್ಜಳ ರಾಜನಿಗೆ ಭೇಟಿಯಾದರು. ಬಾಚರಸರು ಧಾನ್ಯದ ಲೆಕ್ಕಪತ್ರ ಬರೆಯುವ ಪುಸ್ತಕದಲ್ಲಿ ಲೆಕ್ಕ ಬರೆಯುವುದನ್ನು ಬಿಟ್ಟು ಪಂಚಾಕ್ಷರೀ ಮಂತ್ರ ಬರೆಯುತ್ತಿದ್ದಾರೆ ಎಂದು ಮನಬಂದಂತೆ ವಿವರಿಸಿದರು. ಪಡಿಯ (ಅಳತೆಯ) ಲೆಕ್ಕ ಸರಿಯಾಗಿ ಇಟ್ಟಿಲ್ಲ; ಉಗ್ರಾಣದ ವ್ಯವಹಾರವೆಲ್ಲ ಅಸ್ತವ್ಯಸ್ತವಾಗಿದೆ. ತಾವು ತನಿಖೆ ಮಾಡಬೇಕು ಎಂದು ಚಾಡಿ ಹೇಳಿದರು. ಸೊಡ್ಡಳ ಬಾಚರಸರಿಂದಾಗಿ ಧನ ಹಾಳಾಯ್ತು, ಅವರನ್ನು ಕರೆಯಿಸಬೇಕೆಂದು ಪದೆ ಪದೆ ಕುಹಕಿಗಳು ಅರಸನ ಕಿವಿಯೂದಿದರು. ಸಿಟ್ಟಿಗೆದ್ದ ಬಿಜ್ಜಳನು ಬಾಚರಸರಿಗೆ ಕರೆಯಿಸಿ, ಸಂಜೆಯಾಗುವುದರೊಳಗಾಗಿ ಲೆಕ್ಕಪತ್ರಗಳ ಪರಿಶೋಧನೆ ನಡೆದು ವರದಿ ಸಲ್ಲಿಸಬೇಕೆಂದು ಆಜ್ಞಾಪಿಸುತ್ತಾನೆ.

ಸೊಡ್ಡಳ ಬಾಚರಸರು ಎಲ್ಲ ಲೆಕ್ಕ ಸರಿಪಡಿಸಲು ಸುಮಾರು ಹನ್ನೊಂದು ದಿನಗಳು ಬೇಕಾಗುತ್ತಿದ್ದವು. ಆದರೆ ಅಷ್ಟೊಂದು ಸಮಯ ಇಲ್ಲದಿದ್ದರಿಂದ ಬಾಚರಸರು ಬಸವಣ್ಣನವರ ನೆರವಿನಿಂದ ಎಲ್ಲ ಲೆಕ್ಕವನ್ನು ಸರಿಯಾಗಿ ಒಂದೇ ದಿನದಲ್ಲಿ ಒಪ್ಪಿಸಿ ಬಿಟ್ಟರು. ಬಸವಣ್ಣನವರು ಬಾಚರಸರಿಗೆ

ಸಾಧ್ಯವಾಗುವಂತೆ ಸೂರ್ಯನಿಗೆ ಹನ್ನೊಂದು ದಿನಗಳವರೆಗೆ ಅಸ್ತನಾಗ ಬಾರದೆಂದು ಆಣೆಯಿಟ್ಟು, ಸಮಗ್ರ ಲೆಕ್ಕವನ್ನು ಸೂರ್ಯಾಸ್ತದೊಳಗಾಗಿ ಮಾಡಿ ಮುಗಿಸಿದರು ಎಂಬ ಪುರಾಣ ಕಥೆ ಕೂಡ ಇದೆ. ಚಾಡಿಕೋರರ ಕಾರಣದಿಂದ ಬಹಳಷ್ಟು ಕಿರುಕುಳವನ್ನು ಸಹಿಸಬೇಕಾಗಿ ಬಂದಿತ್ತಾದರೂ ಬೆಂಕಿಯಲ್ಲಿ ಸುಟ್ಟಷ್ಟೂ ಬಂಗಾರ ಹೊಳೆಯುವಂತೆ ಸೊಡ್ಡಳ ಬಾಚರಸರ ಜೀವನ ಅಪರಂಜಿಯಂತಾಗಿ ಬೆಳಗುತ್ತಲೇ ನಡೆಯಿತು.

ಬಾಚರಸರಿಗೆ ಪಂಚಾಕ್ಷರಿ ಮಂತ್ರದಲ್ಲಿದ್ದ ಅಚಲವಾದ ಶ್ರದ್ಧೆ ಯನ್ನು ತೋರಿಸುವುದೇ ಈ ಪವಾಡಗಳ ಮುಖ್ಯ ಉದ್ದೇಶವಾಗಿದೆ. ಧಾನ್ಯದ ಲೆಕ್ಕದ ವಿಚಾರವನ್ನು ಹೇಳಿರುವುದು ಅವರ ವಚನದಲ್ಲಿ ನೋಡುತ್ತೇವೆ.

ಬನ್ನಿ ಕರಣಿಕರು, ನೀವು ಲೆಕ್ಕವ ಹೇಳಿ, ಧಾನ್ಯಧಾನ್ಯಂಗಳಸಂಚವನು.
ಹೊಸ ಜೋಳ ಅರವತ್ತು ಲಕ್ಷ ಖಂಡುಗ,
ಶಾಲಿಧಾನ್ಯ ಮೂವತ್ತುಲಕ್ಷ ಖಂಡುಗ,
ಗೋದಿ ಹನ್ನೆರಡುಲಕ್ಷ ಖಂಡುಗ, ಕಡಲೆಬತ್ತೀಸ ಖಂಡುಗ,
ಹೆಸರು ಮೂವತ್ತಾರುಲಕ್ಷ ಖಂಡುಗ,
ನವಣೆ ಹಾರಕ ಬರಗು ಸಾವೆ ದೂಸಿಗಳೆಂಬ ಧಾನ್ಯ ಐವತ್ತುಲಕ್ಷ ಖಂಡುಗ.
ಹೊಸಸುಗ್ಗಿಯ ವೇಳೆಗೆ ಬಹ ಭತ್ತ ಅಗಣಿತ.
ಮಹಾದಾನಿ ಸೊಡ್ಡಳನ ಆರೋಗಣೆಯ ಅವಸರಕ್ಕೆ
ಅಳವಟ್ಟ ಸಯದಾನ ಇನಿತನವ ಧರಿಸಯ್ಯಾ, ಸಂಗನಬಸವಣ್ಣಾ.

'ಬನ್ನಿ ಕರಣಿಕರು ನೀವು ಲೆಕ್ಕವ ಹೇಳಿ, ಧನಧಾನ್ಯ ಸಂಚವನು' ಎಂದು ಬಾಚರಸರು ಅರಮನೆಯಲ್ಲಿರುವ ಲೆಕ್ಕ ಬರೆಯುವ ಕರಣಿಕರನ್ನು ಕರೆದು ಲೆಕ್ಕ ಒಪ್ಪಿಸಿ ಚಾಡಿಕೋರರ ಮುಖಭಂಗ ಮಾಡುತ್ತಾರೆ. ಲೆಕ್ಕಪತ್ರಗಳ ವಿವರಣೆ ಮೆಚ್ಚಿದ ಬಿಜ್ಜಳರಾಜನು ಬಾಚರಸರಿಗೆ ತಮ್ಮ ಕಾಯಕ ಮುಂದುವರಿಸಲು ಗೌರವದಿಂದ ಸಮ್ಮತಿಸಿದನು.

ಅನುಭವಮಂಟಪದಲ್ಲಿ ಬಾಚರಸರು

ಕಲ್ಯಾಣದ ಅನುಭವಮಂಟಪದಲ್ಲಿ ನೂರಾರು ಶರಣರು ನೂರಾರು ಸ್ವರಗಳು ಆದರೆ ಒಂದೊಂದು ಸ್ವರಕ್ಕೂ ಒಂದೊಂದು ಆಕರ್ಷಣೆ ಇದೆ. ಅಮೂಲ್ಯವಾದ ವಿಶಿಷ್ಟ ವ್ಯಕ್ತಿತ್ವವಿದೆ. ಬಸವಣ್ಣನವರ ಮಹಾಮನೆಗೆ ಅನೇಕ ಹಿರಿಯ ಭಕ್ತರು ಕೂಡ ಭಕ್ತಿಭಾವ ಪರವಶರಾಗಿ ಬಂದು ಧನ್ಯರಾಗುತ್ತಿದ್ದರು. ಮಾನವ ಕುಲರ್ಮೂತಯ ಇಂಥ ಶರಣ ಸಂಕುಲದಲ್ಲಿ ಬಾಚರಸರು ಅನುಭಾವದ ಔನತ್ಯ ಸಾಧಿಸಿದರು. ಅವರ ವಚನಗಳು ಮಾಧುರ್ಯದಿಂದ ಕೂಡಿದ್ದು ಭಕ್ತಿಯ ಸ್ವರೂಪ ದರ್ಶನ ಮಾಡಿಸುವ ಪ್ರತಿಭಾ ಸಾಮರ್ಥ್ಯ ಪಡೆದಿವೆ. ಅನುಭವ ಮಂಟಪದಲ್ಲಿ ಪಡೆದ ಅನುಭಾವದ ವಿಷಯಗಳನ್ನು ಸಾದರಪಡಿಸುವ ವಚನಗಳು ಅರ್ಥಗರ್ಭಿತವಾಗಿ ಮನಸ್ಸಿಗೆ ಮುದ ನೀಡುತ್ತವೆ. ಬಾಚರಸರು ಅನುಭವಮಂಟಪದಲ್ಲಿ ಚಿಂತನಮಂಥನ ಗೈಯ್ಯುತ್ತಿದ್ದ ಅನೇಕ ಶರಣರ ಹೆಸರುಗಳನ್ನು ತಮ್ಮ ವಚನಗಳಲ್ಲಿ ಭಾವಪೂರ್ಣವಾಗಿ ಸ್ಮರಿಸಿದ್ದಾರೆ.

ಎನ್ನನೆತ್ತಿಕೊಂಡನಯ್ಯಾ ಸಂಗನಬಸವಣ್ಣನು.
ಎನ್ನ ಮುದ್ದಾಡಿಸಿದನಯ್ಯಾ ಚನ್ನಬಸವಣ್ಣನು.
ಎನಗೆ ಪ್ರಸಾದವನುಣಕಲಿಸಿದನಯ್ಯಾ ಮರುಳಶಂಕರದೇವರು.
ಎನ್ನ ಸಲಹಿದನಯ್ಯಾ ಪ್ರಭುದೇವರು.
ಎನಗೆ ಅರುಹಕೊಟ್ಟನಯ್ಯಾ ಸಿದ್ಧರಾಮಯ್ಯನು.
ಇಂತೀ ಐವರ ಕಾರುಣ್ಯಪ್ರಸಾದವ ಕೊಂಡು ಬದುಕಿದೆನಯ್ಯಾ,
ಏಕಾಂತವೀರ ಸೊಡ್ಡಳಾ.

ಬಸವಾದಿ ಶರಣರನ್ನು ಮನದುಂಬಿಕೊಂಡ ಸೊಡ್ಡಳ ಬಾಚರಸರು ಭಾವತುಂಬಿ ಹೇಳುತ್ತಾರೆ. ಎನ್ನ ಶರಣನನ್ನಾಗಿ ಮಾಡಿದವರು ಬಸವಣ್ಣನವರು, ಚನ್ನಬಸವಣ್ಣನವರು, ಮರುಳಶಂಕರದೇವರು, ಅಲ್ಲಮಪ್ರಭುದೇವರು, ಸಿದ್ಧರಾಮೇಶ್ವರರು, ಇವರೆಲ್ಲ ಶರಣರ ದಿವ್ಯ ಹೊಳಹಿನ ಕರುಣೆಯಿಂದ ನಾನು ಧನ್ಯನಾದೆನು ಎಂದು ಭಕ್ತಿಪರವಶರಾಗಿ ನೆನೆಯುತ್ತಾರೆ.

ಹರಿಬ್ರಹ್ಮಾದಿ ದೇವರ್ಕಳ ಸಲಹುವರೆ, ಮಾತಾ ಪಿತರುಂಟು,
ಅಜಾತಲಿಂಗವ ಸಲಹುವರೆ,
ಮಾತಾಪಿತರಿಲ್ಲವೆಂದು ಅಮ್ಮವ್ವೆ ಮರುಗುತ್ತಿರಲು,
ಅಮ್ಮವ್ವೆಯರ ಮರುಕಕ್ಕೆ ಮೆಚ್ಚಿ ಶಿಶುವಾದನು.
ಅಮವ್ವೆ ಮೊಲೆಯನುಣ ಕಲಿಸಿದಳು.
ಕೊಡಗೂಸು ಹಾಲನಾರೋಗಿಸ ಕಲಿಸಿದಳು.
ಚೋಳಿಯಕ್ಕ ಸಕಲದ್ರವ್ಯಂಗಳು, ಅಪವಿತ್ರಗಳೆಂದವ ಮುಟ್ಟಲೀಯದೆ,
ತನ್ನ ಪ್ರಸಾದವನಾರೋಗಿಸಲು ಕಲಿಸಿದಳು.
ಇಂತೀ ಪ್ರಸಾದವಲ್ಲದೆ ಅನರ್ಪಿತವ ಮುಟ್ಟಲೊಲ್ಲನೆಂದು,
ಸಂಗನಬಸವಣ್ಣನು ಜಂಗಮಪ್ರಸಾದವ ಲಿಂಗಕ್ಕೆ ಸಮರ್ಪಿಸಿ,
ಆ ಪ್ರಸಾದವ ಸ್ವೀಕರಿಸಿ ಪ್ರಸಾದಿಯಾದ
ಕಾಣಾ, ದೇವರಾಯ ಸೊಡ್ಡಳಾ.

ತನು-ಮನ-ಧನದ ಅಹಂಮಿಕೆಯನ್ನು ಅಳಿದು ಸಾಗುತ್ತಿದ್ದ ಶರಣರ ಆರೋಗಣೆಯು ಪ್ರಸಾದತತ್ತ್ವದೊಳಗು. ಅಷ್ಟಾವರಣಗಳಲ್ಲಿ ಗುರು ಲಿಂಗ ಜಂಗಮದ ನಂತರ ಪ್ರಸಾದತತ್ತ್ವ ಬರುತ್ತದೆ. ಲಿಂಗಪೂಜೆಯ ಸಾರ್ಥಕತೆ ಆಗಬೇಕಾದರೆ ಜಂಗಮ ಸೇವೆ ಅತ್ಯಗತ್ಯ. ಬಸವಣ್ಣನವರು ಲಿಂಗದ ಬಾಯಿ ಜಂಗಮದೊಳಗೆಂದರು. ಜಂಗಮ ಎನ್ನುವುದು ಇಡೀ ಸಚರಾಚರ ಹಾಗೂ ಮಾನವ ಕೋಟಿಯನ್ನೊಳಗೊಂಡ ಸೀಮಾತೀತವಾದುದು. ಈ ಲೋಕಾತ್ಮದ ಜೊತೆಗೆ ತನ್ನನ್ನು ಕರಗಿಸಿಕೊಂಡಾಗ ಭಕ್ತ ತನ್ನನ್ನೇ ಜಂಗಮಕ್ಕೆ 'ಪ್ರಸಾದ'ವನ್ನಾಗಿ ನೀಡಿ 'ಜಂಗಮಪ್ರಸಾದಿ' ಆಗುತ್ತಾನೆ. ಈ ವಚನದಲ್ಲಿ ಬಾಚರಸರು ಅಮ್ಮವ್ವೆ ಕೊಡಗೂಸು ಹಾಗೂ ಚೋಳಿಯಕ್ಕರ ಉಲ್ಲೇಖವನ್ನು ಮಾಡಿದ್ದಾರೆ.

ಹರಿಬ್ರಹ್ಮಾದಿ ದೇವರುಗಳಿಗಾದರೋ ಅವರ ಜನನಕ್ಕೆ ಮೂಲವಾದ ತಂದೆತಾಯಂದಿರ ಪಾಲನೆ ದೊರೆಯುತ್ತದೆ. ಆದರೆ ಅಜಾತನಾದ ಶಿವನು ತಂದೆ ತಾಯಿ ರಹಿತನು. ಅವನು ಕೈಗೆತ್ತಿಕೊಂಡವರ ಕೂಸು. ಅವನ

ತಬ್ಬಲಿತನವೇ ಅಮುವ್ವೆ, ಕೊಡಗೂಸು, ಚೋಳಿಯಕ್ಕರಲ್ಲಿ ಮಾತ್ರ ಸಂಗೋಪನೆಯ ಸೆಲೆಯನ್ನುಕ್ಕಿಸುತ್ತದೆ. ಸಂಪೂರ್ಣ ಶರಣಾಗತಿಯುಳ್ಳ ಭಕ್ತಿಗೆ ಬಾಚರಸರು ತಾಯ್ತನದ ಆಯಾಮವನ್ನು ಕಲ್ಪಿಸುತ್ತಿದ್ದಾರೆ. ತಾಯಿಯು ತನ್ನಿಂದ ತನ್ನ ಶಿಶುವನ್ನು ಅನ್ಯವೆಂದಾಗಲಿ, ಹೊರಗಿನದೆಂದಾಗಲಿ ಎಂದೂ ಭಾವಿಸುವುದಿಲ್ಲ. ತನ್ನ ಸಂತತಿಯ ಪಾಲನೆ ಪೋಷಣೆಯು ನಿಸರ್ಗಸಹಜವೋ ಎಂಬಂತೆ ಆಕೆಯಲ್ಲಿ ನೆಲೆಗೊಂಡಿರುತ್ತದೆ. ತಾಯ್ತನವುಳ್ಳವರು ಯಾವುದೇ ಪ್ರತಿಫಲದ ಅಪೇಕ್ಷೆ ಇರಲಾರದೇ ಪೋಷಿಸುವರು. ಸಾಮಾನ್ಯವಾಗಿ ದೈವದೊಂದಿಗಿನ ಹುಸಿಸಂಬಂಧ ಸ್ಥಾಪನೆಯಲ್ಲಿ ಸುಖದ ಹುಡುಕಾಟವೆ ವ್ಯಾವಹಾರಿಕ ರೂಪದಲ್ಲಿ ನಡೆಯುತ್ತಿರುತ್ತದೆ.

ಭಕ್ತಿಸಾಧನೆಯಲ್ಲಿ ಸಾಧಕನು ಅಮುವ್ವೆ, ಕೊಡಗೂಸು, ಚೋಳಿಯಕ್ಕರಂತೆ ತಾಯೀ ಭಾವವನ್ನು ಹೊಂದಿದಾಗ ಮಾತ್ರ ಇಂಥ ಹುಸಿ ವ್ಯಾವಹಾರಿಕ ಧರ್ಮದ ಸೀಮಿತಗಳನ್ನು ಮೀರಿಹೋಗಲು ಸಾಧ್ಯವಾಗುತ್ತದೆ. ಪದಾರ್ಥದ ಭೌತಿಕ ಮೌಲ್ಯವನ್ನಾಧರಿಸಿ ಶಿವನಿಗೆ ಅರ್ಪಿಸುವ ಪ್ರಸಾದವು ಶ್ರೇಷ್ಠತೆಯನ್ನು ಪಡೆಯುವುದಿಲ್ಲ. ಬದಲಾಗಿ ನಿರ್ಮಲವಾದ ಮತ್ತು ನಿರಪೇಕ್ಷವಾಗಿ ಸಮರ್ಪಣಾ ಭಾವದಿಂದಾಗಿ ಆ ಪದಾರ್ಥವು ಪ್ರಸಾದವಾಗಿ ಅರ್ಪಿತಗೊಂಡು ಮೌಲಿಕತೆ ಪಡೆಯುತ್ತದೆ. ಶಿಶುವಿಗೂಡುವ ಹಾಲು, ಆಹಾರಗಳು ಶಿವಭಕ್ತೆಯರ ಭಾವಪೂರ್ಣ ಬದುಕಿನ ಜೀವದ್ರವ್ಯಗಳಾಗಿದ್ದು, ಅವುಗಳು ಸಿದ್ಧಗೊಳ್ಳುವಾಗಲೇ 'ಪ್ರಸಾದ'ವಾಗಿಬಿಟ್ಟಿದೆ. ತಾಯೀಭಾವವುಳ್ಳವರ ಇಡೀ ಅಸ್ತಿತ್ವವೇ ತನ್ನನ್ನು ತಾನು ಶಿವಶಿಶುವಿಗೆ ಪ್ರಸಾದವಾಗಿಸಿಕೊಳ್ಳುವಲ್ಲಿ ಧನ್ಯತಾಭಾವ ಪಡೆಯುತ್ತದೆ. ಅಂಥ ತಾಯ್ತನದ ಭಾವವು ತಮ್ಮ ಭಕ್ತಿ ಸಾಧನೆಯ ದೊಡ್ಡ ಆದರ್ಶವನ್ನು ಸಂಗನಬಸವಣ್ಣನವರು ಪಡೆದವರೆಂದು ಸೊಡ್ಡಳ ಬಾಚರಸರು ವ್ಯಕ್ತಪಡಿಸುತ್ತಾರೆ.

ಬಾಚರಸರು ಉಲ್ಲೇಖಿಸುವ ಮೂವರು ಪುರಾತನ ಶರಣರು ತಾರತಮ್ಯ ಮೂಲದ ಶೋಷಣೆಗೆ ಒಳಗಾದವರು. ಈ ಶರಣರ ಬದುಕಿನ ವೈಯಕ್ತಿಕ ಪ್ರಸಂಗಗಳು ಸಾಮಾಜಿಕ ಬದಲಾವಣೆ ಮತ್ತು ಬಿಡುಗಡೆಯ

ಮಹಾನ್ ಆಶಯಕ್ಕೆ ಪೂರಕವಾಗುತ್ತ ಕ್ರಿಯಾಶಾಲಿಯಾಗಿ ಪ್ರೇರಕ ಶಕ್ತಿಯಾಗಿವೆ.

ಲಿಂಗದೇವನೆಕರ್ತ, ಶಿವಭಕ್ತನೇ ಶ್ರೇಷ್ಠ.
ಕೊಲ್ಲದಿರ್ಪುದೆ ಧರ್ಮ.
ಅಧರ್ಮದಿಂದ ಬಂದುದ ನೊಲ್ಲದಿರ್ಪುದೆ ನೇಮ.
ಅಳುಪಿಲ್ಲದಿರ್ಪುದೆ ವ್ರತ.
ಇದೇ ಸತ್ಪಥ, ಉಳಿದುದೆಲ್ಲ ಮಿಥ್ಯವೆಂದೆ ಕಾಣಾ,
ದೇವರಾಯ ಸೊಡ್ಡಳಾ.

ಸೊಡ್ಡಳ ಬಾಚರಸರು ವಿವಿಧ ಶಬ್ದಗಳನ್ನು ಸಮೂಹ ಪ್ರಜ್ಞೆಯೊಂದಿಗೆ ವ್ಯಾಖ್ಯಾನಿಸುವುದರ ಮೂಲಕ ನಿಖರತೆಯನ್ನು ಸಾಧಿಸಿದ್ದಾರೆ. ಒಂದೇ ಶಬ್ದ ವಿವಿಧ ಸಂದರ್ಭಗಳಲ್ಲಿ ವಿವಿಧ ಅರ್ಥ ಕೊಡುವುದಲ್ಲದೆ, ಶಬ್ದಾರ್ಥ, ಲಕ್ಷಣಾರ್ಥ ಹಾಗೂ ಧ್ವನ್ಯರ್ಥಗಳೂ ಇರುವುವು. ಹಾಗೆಯೇ ಆಧ್ಯಾತ್ಮಿಕ ಶಬ್ದಗಳು ಮತ್ತು ಒಳಗುಟ್ಟಿನ ಅರ್ಥಗಳಿಂದ ಕೂಡಿರುವ ಬೆಡಗಿನ ಶಬ್ದಗಳೂ ಇವೆ. ಈ ಹಿನ್ನೆಲೆಯಲ್ಲಿ ಬಾಚರಸರ ಲಿಂಗದೇವ ಎಂಬ ಪದ ಶಿವನನ್ನು ಪ್ರತಿನಿಧಿಸುತ್ತದೆ. ಶಿವನೇ ಸೃಷ್ಟಿಕರ್ತ ಎಂದು ಸೊಡ್ಡಳ ಬಾಚರಸರು ಸಾರುತ್ತಾರೆ. ಶಿವದೇವನೊಬ್ಬನೇ ದೇವನಾಗಿರುವುದರಿಂದ ಇಡೀ ಜನ ಸಮುದಾಯಗಳಿಗಷ್ಟೇ ಅಲ್ಲದೇ ಸಕಲ ಜೀವರಾಶಿಗೆ ಸೇರಿದವನಾಗಿದ್ದಾನೆ. ಆ ಶಿವನನ್ನು ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ.

ಸರ್ವ ಸಮತ್ವದ ಮನೋಭಾವವುಳ್ಳ ಭಕ್ತನು ತನ್ನನ್ನು ಮಾತ್ರ 'ಕಿರಿಯ' ಎಂದು ಭಾವಿಸುತ್ತಾನೆ. ಆದ್ದರಿಂದಲೇ ಶಿವಭಕ್ತನೇ ಶ್ರೇಷ್ಠ ! ಸೃಷ್ಟಿಯೇ ದೇವರಲ್ಲ. ಅದಕೊಬ್ಬ ಕರ್ತನಿದ್ದಾನೆ ಎಂಬುದನ್ನು ಸೊಡ್ಡಳರು ಸ್ಪಷ್ಟಪಡಿಸುತ್ತಾರೆ. ಇಂಥ ಸೃಷ್ಟಿಕರ್ತನಿಗೆ ಶರಣಾಗುವ ಶಿವಭಕ್ತನೇ ಶ್ರೇಷ್ಠ. ಕೊಲ್ಲದಿರ್ಪುದೇ ಆ ಭಕ್ತನ ಧರ್ಮ. ಅಧರ್ಮದಿಂದ ಬಂದದ್ದನ್ನು ಬೇಡ ಎನ್ನುವುದೇ ಆತನ ವ್ರತ ಆತನೇ ಶರಣ. ಹೀಗೆ ಸಾಗುವ ದಾರಿಯೇ ಸತ್ಪಥ, ಉಳಿದ ಜೀವನ ವಿಧಾನ ಅಸತ್ಯದಿಂದ ಕೂಡಿದ್ದಾಗಿರುತ್ತದೆ ಎಂಬ

ಸತ್ಪಥದ ಪಂಚಸೂತ್ರಗಳು ಲೋಕದ ಮಾನವರಿಗೆ ದಾರಿ ತೋರುವ ಸಾಮರ್ಥ್ಯ ಹೊಂದಿವೆ ಎಂದು ಬಾಚರಸರು ಸ್ಪಷ್ಟಪಡಿಸುತ್ತಾರೆ.

ವಚನಕಾರರ ಚಳವಳಿ ವಾಸ್ತವಿಕ ವಿಚಾರಗಳಿಂದ ಕೂಡಿತ್ತು. ಸಾಮಾಜಿಕ ಬದಲಾವಣೆ ಕೇವಲ ಒಬಿಬ್ಬರು ನಾಯಕರು ಸೃಷ್ಟಿಸುವ ಪವಾಡವೆಂದು ಅವರು ಭಾವಿಸಿರಲಿಲ್ಲ. ಮೇಧಾವಿಗಳು, ದಕ್ಷರೂ ಆದ ನಾಯಕರು ಜನತೆಯ ಕಣ್ಣು ತೆರೆಯಿಸಿ, ಅವರಿಗೆ ಪ್ರೇರಕ ಶಕ್ತಿಗಳಾಗಿ, ಮಾರ್ಗದರ್ಶನ ಮಾಡುತ್ತಾರೇನೋ ನಿಜ, ಆದರೆ ಕೊನೆಗೂ ಕ್ರಾಂತಿ ಫಲಪ್ರದವಾಗುವುದು ಬಹುಸಂಖ್ಯಾತ ಜನತೆಯ ಇಚ್ಛಾ, ಜ್ಞಾನ, ಮತ್ತು ಕ್ರಿಯಾಶಕ್ತಿಗಳಲ್ಲಿ ಬಲವು ಹೆಚ್ಚಾದಾಗಲೇ ಎಂಬುದನ್ನು ಶರಣರು ಮನಗಂಡಿದ್ದರು. ಅದಕ್ಕಾಗಿಯೇ ಅವರ ಲಕ್ಷ್ಯವೆಲ್ಲ, ಪಾಮರರೆಂದು ತಿರಸ್ಕರಿಸಿಬಿಟ್ಟಿದ್ದ ಕೆಳವರ್ಗದವರ ಮೇಲೆ ಕೇಂದ್ರಿತವಾಗಿತ್ತು. ಶರಣರು ಕಾಯಕ ಸಿದ್ಧಾಂತದ ಮೂಲಕ ಅವರಲ್ಲಿ ಆತ್ಮವಿಶ್ವಾಸವನ್ನು ಮತ್ತು ಆತ್ಮಗೌರವವನ್ನು ಹೆಚ್ಚಿಸುವಂತೆ ಮಾಡಿದರು. ಇನ್ನೊಂದು ಮುಖವಾಗಿ ಅವರಲ್ಲಿ ಬೆಳೆದು ನಿಂತ ಅಜ್ಞಾನ, ಅಂಧಶ್ರದ್ಧೆಗಳನ್ನು ತೊಡೆದು ಹಾಕುವಂಥ ವೈಚಾರಿಕ ಪ್ರಜ್ಞೆ ಬೆಳೆಸಿದರು. ಈ ಮಹತ್ಕಾರ್ಯವು ಅಂದಿಗೂ ಇಂದಿಗೂ ಎಂದೆಂದಿಗೂ ಅತ್ಯಂತ ಅವಶ್ಯಕವಾಗಿರುವುದು. ಸಮಾನತೆಯ ಪರಿಕಲ್ಪನೆಯ ಭಕ್ತರಾಗದೆ ಶೋಷಣೆಯಿಂದ ಕೂಡಿದ ಜಾತಿ ಸಮಾಜಕ್ಕೆ ಪರ್ಯಾಯವಾದ ನವಸಮಾಜದ ನಿರ್ಮಾಣ ಸಾಧ್ಯವಿಲ್ಲ ಎಂಬುದು ಶರಣರ ನಿಲವಾಗಿತ್ತು.

ಸೊಡ್ಡಳ ಬಾಚರಸರು ಷಟ್ಸ್ಥಲಗಳ ಕುರಿತಾಗಿ ತಮ್ಮ ವಚನದಲ್ಲಿ ವ್ಯಾಖ್ಯಾನಿಸಿದ್ದಾರೆ. ಭಕ್ತರಾಗಬೇಕಾದರೆ ತನ್ನೊಳಗೆ ಅಡಗಿರುವ ಕಾಮನೆಗಳನ್ನು ಕಳೆದುಕೊಳ್ಳಬೇಕು ಎನ್ನುತ್ತಾರೆ.

> ಭಕ್ತನಾದಡೆ ತನುಮನದಾಸೆಯಳಿದುಳಿದಿರಬೇಕು.
> ಮಹೇಶ್ವರನಾದಡೆ ಪರಧನ ಪರಚಿಂತೆ ಪರಾಂಗನೆಯರೆಡೆಯಳಿದಿರಬೇಕು.
> ಪ್ರಸಾದಿಯಾದಡೆ ಸುಖ ರುಚಿಯ ಗ್ರಹಣ ಮರೆದು,
> ಪ್ರಸಾದ ಪುಟವಳಿಯದೆ ಉಳಿದಿರಬೇಕು.

ಪ್ರಾಣಲಿಂಗಿಯಾದಡೆ ಘಟದಾಸೆಯಂತೊರೆದು,
ಪ್ರಾಣಲಿಂಗದೊಳಗೆ ಬೆರೆಸಿ ಬೇರಿಲ್ಲದಿರಬೇಕು.
ಶರಣನಾದಡೆ ಸತಿಯ ಸಂಗವಳಿದು, ಲಿಂಗಕ್ಕೆ ತಾಯಾಗಿರಬೇಕು.
ಲಿಂಗೈಕ್ಯನಾದಡೆ ಆಪ್ಯಾಯನಮಡಸಿ,
ಸುಖದುಃಖಮಂತಾಳಿನಿ ಭ್ರಾಂತನಾಗಿರಬೇಕು.
ಮಾತಿನಮೋಡಿಯಲ್ಲಿ ಸಿಲ್ಕದು ಶಿವಾಚಾರ.
ಇಂತೀ ಷಡುಸ್ಥಲವಾರಿಗೂ ಅಳವಡದು.
ಸೊಡ್ಡಳದೇವನು, ಷಡುಸ್ಥಲಭಕ್ತಿಯನು
ಬಸವಣ್ಣಂಗೆಮೂರ್ತಿಯಮಾಡಿದನು.

ಭಕ್ತನೆನಿಸಿಕೊಳ್ಳಬೇಕಾದರೆ, ತನುಮನದಾಸೆ ಅಳಿಯಬೇಕು. ಅಂದಾಗ ಮಾತ್ರ ಆ ಹಂತಕ್ಕೆ ತಲುಪಲು ಸಾಧ್ಯವಾಗುವುದು. ಪರಧನ, ಪರಾಂಗನೆಯರಿಂದ ದೂರವಿರಬಲ್ಲಾತನೇ ಮಹೇಶ್ವರ ಸ್ಥಲಕ್ಕೆ ಏರಬಹುದು. ಸುಖರುಚಿಯ ಗ್ರಹಣ ಮರೆತವರಿಗೆ ಪ್ರಸಾದಿಸ್ಥಲವು, ಶರೀರ ವ್ಯಾಮೋಹ ತ್ಯಜಿಸಿ ಪ್ರಾಣಲಿಂಗದೊಳಗೆ ಬೆರಸಿ ಬೇರಿಲ್ಲದಂತೆ ಆದವನೇ ಪ್ರಾಣಲಿಂಗಿ. ವಿಷಯಸುಖಗಳ ತೀರದ ಆಸೆ ಎಂಬ ಹೆಮ್ಮರ ಎತ್ತರೆತ್ತರಕ್ಕೆ ಬೆಳೆದಂತೆ, ಅದರ ಬೇರುಗಳು ಆಳದಾಳಕ್ಕಿಳಿಯುತ್ತವೆ. ಮೇಲಿಂದ ಮೇಲೆ ಬರಿಯ ರೆಂಬೆ ಕೊಂಬೆಗಳನ್ನು ಕತ್ತರಿಸಿದರೆ ಅವು ಮತ್ತೆ ಮತ್ತೆ ಚಿಗುರಿ ಸೊಂಪಾಗಿ ಬೆಳೆಯುತ್ತವೆ. ಆದರೆ ಬೇರುಗಳನ್ನು ಕತ್ತರಿಸುತ್ತಾ ಬಂದಲ್ಲಿ ಮರದ ಬೆಳವಣಿಗೆ ಕುಗ್ಗುತ್ತದೆ. ಅಂತೆಯೇ ವಿಷಯವಾಸನೆಯ ಕಾಮನೆಗಳ ಬೇರಾದ 'ನಾನು' ಎಂಬ ಅಹಂಕಾರವನ್ನು ನಿರಸನಗೊಳಿಸಿಕೊಂಡಾಗ ಮಾತ್ರ ಪ್ರಾಣಲಿಂಗದೊಳಗೆ ಬೆರೆಯಲು ಸಾಧ್ಯವಾಗುವುದು.

ಭಕ್ತಸಾಧಕರು ಪುರುಷಾಹಂಕಾರವನ್ನು ನೀಗಿಸಿಕೊಂಡು ತಮ್ಮನ್ನು ಸತಿಯನ್ನಾಗಿಸಿಕೊಂಡು, ಲಿಂಗವನ್ನು ಪತಿಯಾಗಿ ಭಾವಿಸಿಕೊಂಡಾಗ ಶರಣತ್ವಕ್ಕೆ ಹೋಗಲು ಸಾಧ್ಯ. ಶರಣಸತಿ ಲಿಂಗಪತಿಗಿಂತ ಭಿನ್ನವಾದ ಮತ್ತೊಂದು ಸಂಬಂಧದ ನೆಲೆಯನ್ನು ಸೊಡ್ಡಳ ಬಾಚರಸರು ಕಲ್ಪಿಸಿದ್ದಾರೆ.

‘ಭಕ್ತನು ಲಿಂಗಕ್ಕೆ ತಾಯಿಯಾಗಿರಬೇಕು’ ಲಿಂಗಕ್ಕೆ ಹಿತಕರವಾದುದು ತನಗೂ ಹಿತಕರ. ಲಿಂಗಕ್ಕೆ ಒದಗುವ ಸುಖ ದುಃಖವು ತನಗೂ ಒದಗುವದು ಇಂಬ ವಿಭಿನ್ನ ಭಾವವು ತಾಯಿ ತನ್ನ ಮಗುವಿನ ಜೊತೆ ಹೊಂದಿರುವ ಭಾವಸಂಬಂಧಕ್ಕೆ ಸಮಾನವಾದುದು.

ಬಸವಣ್ಣನವರ ಭಕ್ತಿ ಸಾಧನೆಯನ್ನು ಬಾಚರಸರು ತುಂಬು ಮನದಿಂದ ಗೌರವಪೂರ್ವಕ ನಮಿಸುತ್ತಾರೆ. ಅನುಭವದ ಪಥವು ಮಾತಿನ ಮೋಡಿಗೆ ಸಿಲುಕಲಾರದ್ದು. ಈ ಷಟ್ಸ್ಥಲಗಳು ಭಾಷಿಕ ನೆಲೆಯನ್ನು ಮೀರಿ ಆಚರಣೆಯಲ್ಲಿ ಬಂದಾಗ ಅದರ ನಿಜಾರ್ಥ ಹೊಳೆಯುವುದು. ಪಂಚಾಚಾರಗಳಲ್ಲಿ ಒಂದಾದ ಶಿವಾಚಾರವನ್ನು ‘ಬಾಳಬಾಯಧಾರೆ’ ಎನ್ನಲಾಗುತ್ತದೆ. ನಡೆ-ನುಡಿ ಒಂದಾದರೆ ಅಂಥವರು ಮಾತ್ರ ಶಿವಾಚಾರಕ್ಕೆ ಸಲ್ಲುವರು. ಇವೆಲ್ಲಕ್ಕೂ ಬಸವಣ್ಣನವರಂತಹ ಸಾಧಕರ ವಿಷಯದಲ್ಲಿ ಷಡುಸ್ಥಲ ಭಕ್ತಿಯೇ ಮೂರ್ತಿಯಾಗಿ ಪರಿಣಮಿಸುವಂತೆ ದೈವೀಕೃಪೆಯಿದೆ. ಹೊರಗಣ್ಣಿನ, ಲೌಕಿಕ ನೆಲೆಯ ಮೂರ್ತಿಯು ಸಾಧಕನ ಅಂತರಂಗದಲ್ಲಿ ಕರಗಿ ಕಣ್ಮರೆಯಾಗಿದೆ. ಲಿಂಗೈಕ್ಯದ ಸ್ಥಿತಿಯಲ್ಲಿ ‘ಮೂರ್ತಿ’ ಇಲ್ಲವಾಗುತ್ತ ಭಕ್ತಿ ಮಾತ್ರವೇ ಸ್ಥಾಯಿಯಾಗಿ ಉಳಿಯುತ್ತದೆ.

ವಚನಗಳ ಸ್ವರೂಪವೆಂದರೆ ವಚನಕಾರರ ಮನಸ್ಸಿನ ಸ್ವರೂಪ. ದೈವಶಕ್ತಿಯನ್ನು ಕುರಿತ ಅವರ ಹಂಬಲ, ಪ್ರಾರ್ಥನೆ, ಭಕ್ತಿಯ ವಿವಿಧ ಅನುಭವಗಳು, ತಾವು ಕಂಡ ಸತ್ಯಸ್ವರೂಪವನ್ನು ಇತರರಿಗೂ ಪರಿಚಯ ಮಾಡಿಕೊಡುವ ಲೋಕಕಾರುಣ್ಯ. ಮನಸ್ಸಿನ ಎಲ್ಲ ಸ್ವರೂಪವನ್ನು ವಚನಗಳ ರೂಪದಲ್ಲಿ ಕಾಣುತ್ತೇವೆ. ವಚನಗಳೆಂದರೆ ಕೇವಲ ಭಾಷಿಕ ರಚನೆಗಳಲ್ಲ. ಶರಣರ ವಚನಗಳು ಕ್ರಿಯಾಶೀಲವಾಗುವುದರ ಬಗ್ಗೆ ಬಾಚರಸರ ದಿಟ್ಟ ನಿಲುವಿನ ವಿನ್ಯಾಸವುಳ್ಳ ವಚನವಿದು.

ವಚನದ ರಚನೆಯ ನುಡಿವ ಬರುಬಾಯ ಭುಂಜಕರೆಲ್ಲ
ಭಕ್ತರಪ್ಪರೆ ಅಯ್ಯಾ ?
ಮಾಡುವ ದಾಸೋಹದಿಂದ ಭಕ್ತಂಗೆ ಅವಗುಣಂಗಳಿಲ್ಲದಿರಬೇಕು.

ಕೋಪದ ಕೆಚ್ಚಂ ಕಡಿದು, ಲೋಭಲಂಪಟಮಂ ಕೆದರಿ,
ಮೋಹದ ಮುಳ್ಳುಮೊನೆಯ ತೆಗೆದು, ಮದದಚ್ಚಂ ಮುರಿದು,
ಮಚ್ಚರಿಪ ಸರ್ಪನಂ ಸಮತೆಯೆಂಬ ಗಾರುಡದಲ್ಲಿ ಗಾರುಡಿಸಿ,
ಕರುಣಾದಿ ಗುಣಂಗಳಿಚ್ಛೆಗೆ ಹರಿಯಲೀಯದೆ,
ವಿಶ್ರಮಿಸಿಪ್ಪ ಭಕ್ತನ ಕಾಯವೆ ಕೈಲಾಸ.
ಅಂತಲ್ಲದೆ ಬರಿಯ ಮಾತಿಂಗೆ ಮಾತನೆ ಕೊಟ್ಟು,
ತಾನಾಡಿದುದೆ ನೆಲೆಯೆಂಬಾತ ಭಕ್ತನೆ ? ಅಲ್ಲ, ಉಪಜೀವಿ.
ಹೇಮದಿಚ್ಛೆಗೆ ಹರಿದು ಕಾಮರತಿಗಳುಪವ,
ಕೋಪದುರಿಯ ಹೊದ್ದುಕೊಂಬ, ಲೋಭಮೋಹದ ಕೆಚ್ಚ
ಕೂಡಿಕೊಂಡು,
ನರಕದೊಳಗೋಲಾಡುವಾತ ಭಕ್ತನೆ ? ಅಲ್ಲ.
ಆದಿಯಲ್ಲಿ ನಮ್ಮವರು ಹೊನ್ನು ಹೆಣ್ಣು ಮಣ್ಣು,
ಈ ತ್ರಿವಿಧವ ಬಿಟ್ಟಿದ್ದರೆ ? ಇಲ್ಲ.
ಆವ ತಲೆಯೆತ್ತಲೀಯರಾಗಿ, ಅನ್ಯಸಂಗವ ಹೊದ್ದರು.
ಭವಿಮಿಶ್ರವ ಮುಟ್ಟರು, ಹಮ್ಮುಬಿಮ್ಮುಯಿಲ್ಲದಿಪ್ಪ ಇಂತಪ್ಪರೆ ನಮ್ಮ
ಭಕ್ತರು.
ನಮ್ಮ ಭಕ್ತರ ನೆಲೆಯ, ಮಹಾದಾನಿಸೊಡ್ಡಳಾ,
ನೀನೆ ಬಲ್ಲೆಯಲ್ಲದೆ, ಉಳಿದ ಜಡಜೀವಿಗಳೆತ್ತ ಬಲ್ಲರು ?

ಆದ್ಯರ ವಚನಗಳ ಪಠಣ ಮಾತ್ರದಿಂದ ಭಕ್ತಿ ಸಾಧನೆಯಾಗುವುದೆಂಬ ಭಾವ ಭ್ರಮಿತರ ಆಶಯದ ನುಡಿಗಳನ್ನು ಶರಣ ಬಾಚರಸರು ನಂಬುವುದಿಲ್ಲ. ಸತ್ಯಶುದ್ಧ ಕಾಯಕದಿಂದ ದೊರೆತ ಪ್ರತಿಫಲವನ್ನು ದಾಸೋಹಕ್ಕೆ ವಿನಿಯೋಗಿಸಿದಾಗ ಮಾತ್ರ ದಾಸೋಹ ಸಾರ್ಥಕಗೊಳ್ಳುತ್ತದೆ. ಭಕ್ತನಾಗಬೇಕಾದರೆ ತನ್ನ ಶರೀರ ಹಾಗೂ ಮನಸ್ಸಿನ ಒಳಗಿನ ಅವಗುಣಗಳನ್ನು ಕಿತ್ತು ತೆಗೆಯಬೇಕು. ಮನದ ಅನಿಯಂತ್ರಿತ ವಿಕಾರಗಳನ್ನು ನೀಗಿಸಿಕೊಂಡಾಗ ಮಾತ್ರ ಕಾಯಕದ ಸತ್ಯ ಶುದ್ಧತೆಯು ದೊರೆಯುತ್ತದೆ.

ಕಾಮ, ಕ್ರೋಧ, ಮೋಹ, ಲೋಭ, ಮದ, ಮತ್ಸರಗಳೆಂಬ ಅರಿಷಡ್ವರ್ಗಗಳನ್ನು ಗೆಲ್ಲುವ ಪರಿಯನ್ನು ಬಾಚರಸರು ರೂಪಕಗಳ ಮೂಲಕ ವಿವರಿಸುತ್ತಾರೆ. ಕೋಪ, ಲೋಭ, ಮೋಹಾದಿಗಳೊಂದಿಗೆ ಜೀವನ ನಡೆಸುವವನ ಬದುಕು ನರಕಸದೃಶವಾದುದು ಎನ್ನುತ್ತಾರೆ. ಹೆಣ್ಣು, ಹೊನ್ನು, ಮಣ್ಣುಗಳ ಮೇಲಿನ ಆಕರ್ಷಣೆಯನ್ನು, ಅವುಗಳು ಹೇರುವ ನಿಯಂತ್ರಣವನ್ನು ನೀಗಿಸಿಕೊಳ್ಳುವವರೆಗೆ 'ಭಕ್ತ' ಎಂಬ ಸ್ಥಲಕ್ಕೆ ಯಾರೂ ಅರ್ಹರಾಗುವುದಿಲ್ಲ. ತನು-ಮನ-ಧನಗಳು ದಾಸೋಹ ಮಾಡಿ ಸವೆಯಬೇಕು. ಯಾವ ಅಹಂಕಾರವಿಲ್ಲದೆ, ಹಮ್ಮು-ಬಿಮ್ಮುಗಳನ್ನು ತನ್ನತ್ತ ಸುಳಿಯಲು ಬಿಡದೆ ಇರುವವನೇ ಭಕ್ತನು. ಶಿವನೊಡ್ಡುವ ಅತ್ಯಂತ ಕಠಿಣವಾದ ಪರೀಕ್ಷೆಯಲ್ಲಿ ಗೆದ್ದವನೇ ನಿಜವಾದ ಭಕ್ತ. ಈ ಸತ್ಯವನ್ನು ಅರಿಯುವ ಶಕ್ತಿ ಸದ್ಗುಣಿಗಳಿಗಲ್ಲದೆ ಭಾವ ಭ್ರಮಿತರು ಅರಿಯರು ನೋಡಾ ಇದರ ಅನುವ ನೀನೆ ಬಲ್ಲೆ ಮಹಾದಾನಿ ಸೊಡ್ಡಳಾ ಎನ್ನುತ್ತಾರೆ ಬಾಚರಸರು.

ಒಳಗಿನ ದೇವರನ್ನು ಅರಿಯಿರಿ

ಬಹುದೇವೋಪಾಸನೆ ಎಂಬುವ ರೋಗ ಉಚ್ಚ ಹಾಗೂ ಕೆಳವರ್ಣ-ವರ್ಗಗಳೆರಡರಲ್ಲೂ ಉಲ್ಬಣಗೊಂಡು ಹರಡಿದ್ದ ಕಾಲ ಅದಾಗಿತ್ತು. ಸಾಮಾನ್ಯ ಜನತೆಯ ದೈವಶ್ರದ್ಧೆ ಹಾಗೂ ಧರ್ಮಾಚರಣೆಯಲ್ಲಿ ಭಯ ಮತ್ತು ಅಜ್ಞಾನ ಎದ್ದು ತಾಂಡವವಾಡುತ್ತಿದ್ದ ಕುರಿತು ವಚನಕಾರರು ತಮ್ಮ ವಚನಗಳಲ್ಲಿ ಹಿಡಿದಿಟ್ಟಿರುವುದನ್ನು ಕಾಣಬಹುದು. ಶರಣರು ಜನಸಾಮಾನ್ಯರ ಮನಸ್ಸನ್ನು ಮೌಢ್ಯವೆಂಬ ಕಪಿಮುಷ್ಠಿಯಿಂದ ಬಿಡುಗಡೆಗೊಳಿಸಲು ಪ್ರಯತ್ನಿಸಿದರು. ಏಕದೇವೋಪಾಸನೆಯ ಶುದ್ಧಾಚರಣೆಗಳಲ್ಲಿ ಅವರ ಶ್ರದ್ಧೆಯನ್ನು ಬೆಳೆಸಲು ಮಾರ್ಗ ಸೂಚಿಸಿದರು.

ಲಿಂಗವ ಬಿಟ್ಟು ಬೇರೆ ಬೇರೆ ದೇವರುಗಳನ್ನು ಪೂಜಿಸಲಾಗದು. ಶುಚಿತ್ವಕ್ಕಾಗಿಯೇ ಗಂಗೆಯ ಸ್ನಾನ ಮಾಡಿದ ವ್ಯಕ್ತಿಯು ಹೋಗಿ ಮತ್ತೆ ಸಗಣಿಯಲ್ಲಿ ಹೊರಳಾಡುವುದಿಲ್ಲ. ಒಂದು ವೇಳೆ ಹಾಗೆ ಮಾಡಿದರೆ

ಹುಚ್ಚರೆಂದು ಕರೆಯಬೇಕಾಗುತ್ತದೆ ಎಂದು ಬಾಚರಸರು ಎಚ್ಚರಿಸುವ ಮೂಲಕ ಏಕದೇವೋಪಾಸನೆಯ ಮಹತ್ವವನ್ನು ಸಾರುತ್ತಾರೆ.

ಗಂಗಾನದಿಯಲ್ಲಿ ಮಿಂದು ಗಂಜಳದಲ್ಲಿ ಹೊರಳುವರೆ?
ಚಂದನವಿದ್ದಂತೆ ದುರ್ಗಂಧವ ಮೈಯಲ್ಲಿ ಪೂಸುವರೆ?
ಸುರಭಿ ಮನೆಯಲ್ಲಿ ಕರೆವುತ್ತಿರೆ, ಹರಿವರೆ ಸೊಣಗನ ಹಾಲಿಂಗೆ?
ಬಯಸಿದಮೃತವಿದ್ದಂತೆ,
ಅಂಬಿಲವ ನೆರೆದುಂಬ ಭ್ರಮಿತಮಾನವಾ, ನೀನು ಕೇಳಾ.
ಪರಮಪದವಿಯನೀವ ಚೆನ್ನಸೊಡ್ಡಳನಿದ್ದಂತೆ,
ಸಾವದೇವರ ನೋಂತರೆ, ಕಾವುದೆ ನಿನ್ನ ?

ಗಂಗಾನದಿಯ ಶುದ್ಧೀಕರಣ ಗುಣ, ಚಂದನದ ಸುಗಂಧಿತ ಸ್ಥಿತಿ, ಸುರಭಿಯ ಸ್ವಾದಿಷ್ಟ ಹಾಲಿನಂತೆ ಸೊಡ್ಡಳದೇವನ ಕ್ರಿಯಾಚೈತನ್ಯವಿದೆ. ಅಮೃತದ 'ಪರಮಪದವಿ'ಯವರೆಗೂ ಚೈತನ್ಯ ಸತ್ವದ ಪರಾಕಾಷ್ಠೆಯಿದೆ. ಸುಗಂಧವನ್ನು ಸೂಸುವ ಚಂದನವು ಬಳಿಯಲ್ಲಿದ್ದರೂ; ಅದನ್ನು ಬಿಟ್ಟು ಕೆಟ್ಟವಾಸನೆ ಬರುವ ಪದಾರ್ಥವನ್ನು ಮೈಗೆ ಹಚ್ಚಿಕೊಳ್ಳುವವರು ಬುದ್ಧಿಹೀನರು. ಬುದ್ಧಿಯಿದ್ದವರು ಸುಗಂಧ ದ್ರವ್ಯಕ್ಕಾಗಿ ಹಂಬಲಿಸುವರು. ಕಾಮಧೇನು ಮನೆಯಲ್ಲಿ ಹಾಲು ಕೊಡುತ್ತಿದ್ದರೂ, ನಾಯಿಯ ಹಾಲಿಗೆ ಆಸೆ ಪಡುವವನ ಮನಸ್ಥಿತಿಗೆ ಏನೆನ್ನಬೇಕು ? ತನ್ನ ಮನೆಯಲ್ಲಿಯೇ ಅಮೃತವಿದೆ, ಅದನ್ನು ಸೇವಿಸದೆ ಅಂಬಲಿಗಾಗಿ ಹಂಬಲಿಸುವ ಭ್ರಮಿತರನ್ನು ಎಚ್ಚರಿಸುತ್ತಾರೆ.

ಇಷ್ಟಾರ್ಥವನ್ನು ಪೂರೈಸುವ ಇಷ್ಟಲಿಂಗವು ಕರಸ್ಥಲದಲ್ಲಿ ಇದ್ದರೂ; ಅದರ ಅನುಸಂಧಾನ ಬಿಟ್ಟು, ಬೇರೆ ದೇವರುಗಳ ಪೂಜೆಗಾಗಿ ಹೋಗುವವರು ಆಳವಾದ ಭ್ರಮೆಯಲ್ಲಿ ಬಂಧಿತರಾದವರು. ಇಂಥ ಮರಳು ಮಾನವರಿಗೆ ಏನು ಹೇಳಬೇಕು? ಈ ಹುಟ್ಟು-ಸಾವುಗಳಿಗೆ ಸಿಲುಕಿ ಬಳಲುವುದನ್ನೇ ನೀಡುವ ದೇವರುಗಳನ್ನು ಲೋಕದ ಮಾನವರು ನಿರ್ಮಿಸಿದ್ದಾರೆ ಎಂದು ತಿಳಿಸಿದರು. ಬಾಚರಸರು ಶಾಶ್ವತ ಪದವನ್ನು

ಕರುಣಿಸುವ ಇಷ್ಟಲಿಂಗಾರ್ಚನೆ ಮಾಡುವುದು ಸರ್ವ ಶ್ರೇಷ್ಠವಾದುದೆಂದು, ಪರಿಣಾಮಕಾರಿಯಾಗಿ ವಿವರಿಸುವ ಮೂಲಕ ಏಕದೇವೋಪಾಸನೆಯ ಮಹತ್ವ ಸಾರಿದ್ದಾರೆ.

ಸಮಸ್ತ ಜಗತ್ತನ್ನು ಶಿವನು ತನ್ನ ಉರಿಗಣ್ಣಿನಿಂದ ಸುಟ್ಟು 'ಹರಿಹರ' ಎಂಬ ಹೆಸರು ಪಡೆದುದಾಗಿ ಸೊಡ್ಡಳ ಬಾಚರಸರು ಹೇಳುತ್ತಾರೆ. ಹರಿಯ ಎದುರು ಶಿವ ಹೇಗೆ ಶ್ರೇಷ್ಠನೋ ಬಲಿಷ್ಠನೋ ಹಾಗೇ ಅನ್ಯದೈವಗಳೆದುರು ಶಿವನ ರೂಪುಳ್ಳ ಶಿವಭಕ್ತರು ಹೆಚ್ಚು ಎಂಬುದನ್ನು ನುಡಿದಿದ್ದಾರೆ.

ಘುಡುಘುಡಿಸಿ ಅನ್ಯದೈವಂಗಳ ಕೊಡೆವಿಡಿಸಿದನು.
ಪಿಂಬೇರ ಮೈಲಿಗೆಯನು ಅಡಗಿಸಿದ ಬೋ.
ದೈವಂಗಳ ದರ್ಪವನು ಉಡಿಗಿಸಿದ ಭೋ.
ಮುದನೂರ ದಾಸನ ತವನಿಧಿಯನು ಉರಿಗಣ್ಣ ಬಿಟ್ಟೊಮ್ಮೆ,
ಹರಿಯ ಪ್ರತಿಮೆಯನೊಡೆದಡಗಿಸಿದ ಭೋ.
ದೈವಂಗಳ ದರ್ಪವನು ಮನ್ನಣೆಯ ಮಾಡದೆ,
ಮಾರಿಯ ಕೈಯ ಮೊರಡಿಯ ಧಾನ್ಯಂಗಳ ಮಿಡಿಸಿದನು.
ಓಂ ನಮಃ ಶಿವಾಯ ಶಂಕರದಾಸ, ಪಂಚವದನ ಸೊಡ್ಡಳಾ.

ಪವಾಡಗಳ ಉಲ್ಲೇಖವಿರುವ ಈ ವಚನದಲ್ಲಿ ಶಿವಶರಣ ಶಂಕರ ದಾಸಿಮಯ್ಯ ಸೂಜಿಯಿಂದ ಕೌದಿಯನ್ನು ಹೊಲಿದು ಮಾರಾಟ ಮಾಡಿ ಬಂದಿದ್ದರಲ್ಲಿ ಜಂಗಮ ದಾಸೋಹ ಮಾಡುತ್ತ ಜೀವನ ಸಾಗಿಸುವ ಕಾಯಕ ಮಾಡುತ್ತಿದ್ದನು. ಶಂಕರದಾಸಿಮಯ್ಯನ ಕಾಯಕ ಭಕ್ತಿಗೆ ಮೆಚ್ಚಿ ಶಿವನು ಪ್ರತ್ಯಕ್ಷನಾಗಿ ಬೇಡಿದ್ದನ್ನು ನೀಡುವೆನೆಂದ. ರಾತ್ರಿಯಲ್ಲಿ ಸೂಜಿಗೆ ದಾರ ಪೋಣಿಸಲು ಸಾಧ್ಯವಾಗುವಂತೆ ದೃಷ್ಟಿಯನ್ನು ಕೊಟ್ಟರೆ ಸಾಕು ಎನ್ನುತ್ತಾನೆ. ಆಗ ಶಿವನು ತನ್ನ ನೊಸಲಗಣ್ಣನ್ನೇ ಶಂಕರದಾಸಿಮಯ್ಯನಿಗೆ ನೀಡಿದನು. ಈ ನೊಸಲಕಣ್ಣು 'ಸಿಡಿಲ ಸಂಘಾತಕ್ಕೆ ಬರಸಿಡಿಲು ಬಂದಂತೆ, ವಡಬಾಗ್ನಿಗೆ ಪ್ರಳಯಾಗ್ನಿ ನೆರವಾದಂತೆ ಸೂರ್ಯನ ಉಷ್ಣಕಿರಣದೊಳು ದಾವಾಗ್ನಿ ಬೆರೆತಂತೆ' ಒಪ್ಪುತ್ತಿರಲು; ಅನ್ಯದೈವಗಳನ್ನು ಆರ್ಭಟಿಸಿ ಸುಡತೊಡಗಿದವು,

ಅವುಗಳು ಹೆದರಿ ಶಂಕರದಾಸಿಮಯ್ಯನಿಗೆ ಸೇವೆಯನ್ನು ಮಾಡತೊಡಗಿದವು. ಅವುಗಳ ದರ್ಪ ಉಡುಗಿತು. ಪೆಂಬೇರ ಮೈಲಾರನೆಂಬ ಕ್ಷುದ್ರದೈವದ ಕೈಯಿಂದ ಶಂಕರದಾಸಿಮಯ್ಯ ತಾನು ಉಗಿದ ತಾಂಬೂಲವನ್ನೆತ್ತಿಸಿ ಕೊಂಡುದುದನ್ನು ಕಂಡು, ಮಾಳಾದೇವಿ ಎಂಬುವಳು 'ತಮ್ಮ ದೇವರ ನಾಚಿಕೆ ಹೊಯಿತ್ತೆಂದು' ಬೆರಗಾದಾಗ, ಮತ್ತೆ ಮೈಲಾರನಿಂದ ಕೊಡೆಯ ಹಿಡಿಸಿ ಶಂಕರ ದಾಸಿಮಯ್ಯ ನಡೆದ. ಮಾರಿಯ ಕೈಯಲ್ಲಿ ಕೊಟ್ಟಣವ ಕುಟ್ಟಿಸಿದ. ಭೈರವಿಯ ಕೈಯಲ್ಲಿ ಕಟ್ಟಿಗೆ ಹೊರೆಸಿದ, ಕಾಳರಾತ್ರಿಯ ಕೈಯಲ್ಲಿ ಅಂಗಳವ ಉಡುಗಿಸಿದ.

ಒಮ್ಮೆ ಶಂಕರದಾಸಿಮಯ್ಯನ ಮಠಕ್ಕೆ ದೇವರದಾಸಿಮಯ್ಯ ಬಂದು, ಅಲ್ಲಿ ಧಾನ್ಯದ ಕೊರತೆಯ ಗಮನಿಸಿದ. ದೇವರ ದಾಸಿಮಯ್ಯ ಶಿವನ ವರದಿಂದ ತನ್ನಲ್ಲಿದ್ದ ಭತ್ತವನ್ನು ಅಲ್ಲಿ ತಂದು ಸುರಿದರು. ಭಕ್ತನಾಗಿ ಮನದಹಂಕಾರವನ್ನು ಚಿವುಟಲೆಂಬಂತೆ, ದೇವರ ದಾಸಿಮಯ್ಯನ ತವನಿಧಿಯನ್ನು ಶಂಕರ ದಾಸಿಮಯ್ಯ ಬತ್ತಿಸಿದ. ಮನೆಗೆ ಹೋದ ದೇವರ ದಾಸಿಮಯ್ಯ ತನ್ನ ತವನಿಧಿ ಹೋದುದನ್ನು ಕಂಡು, 'ಅಹಂಕಾರದಿಂದ ಕೆಟ್ಟೆ' ಎಂದು ಶಂಕರನ ಪಾದ ಕಟ್ಟಿಕೊಳ್ಳಲು ಅವರಿಗೆ ಮರಳಿ ತವನಿಧಿ ದೊರಕಿತು. ತಾವೇ ಶ್ರೇಷ್ಠರೆಂಬ ಕೆಲವು ಭಕ್ತರು ಪಂಚಲೋಹದಿಂದ ವಿಷ್ಣುವಿನ ಮೂರ್ತಿಯನ್ನು ಮಾಡಿಸಿ, 'ಅಖಿಲ ದೇವತೆಗಳನ್ನು ದೃಷ್ಟಿಯಿಂದ ಕರಗಿಸಿದಂತೆ ಈ ವಿಗ್ರಹವನ್ನು ಕೆಡಿಸು' ಎಂದು ಶಂಕರ ದಾಸಿಮಯ್ಯನಿಗೆ ಸವಾಲಿಕ್ಕಿದರು. ತನ್ನ ನೊಸಲಗಣ್ಣನ್ನು ತೆರೆದು ಕೋಪದಿಂದ ಶಂಕರದಾಸಿಮಯ್ಯನು ನೋಡಲು ಆ ಪ್ರತಿಮೆ ಕ್ಷಣಾರ್ಧದಲ್ಲಿ ಉರಿದು ಬಿತ್ತು. ಈ ಚೋದ್ಯವನ್ನು ಕಂಡ ಭಕ್ತರೆಲ್ಲ ಅಹಂಮಿಕೆಯನ್ನು ಬಿಟ್ಟು ಶಂಕರದಾಸನಿಗೆ ಶರಣಾಗತರಾಗಿ ಪ್ರಾಣಲಿಂಗಗಳನ್ನು ಧರಿಸಿ ಶಿವಭಕ್ತರಾದರು.

ಹೀಗೆ ಶಂಕರ ದಾಸಿಮಯ್ಯನ ಈ ಪವಾಡ ಕಥನಗಳು ಶಿವಪಾರಮ್ಯದೊಂದಿಗೆ ಅನ್ಯ ಮತದೊಂದಿಗಿನ ಸಂಘರ್ಷದಲ್ಲಿ ಶಿವಭಕ್ತರು

ಪಡೆದ ಗೆಲುವನ್ನು ಹಾಸುಹೊಕ್ಕಾಗಿಸಿಕೊಂಡಿವೆ. ಸೊಡ್ಡಳ ಬಾಚರಸರ ಬಹುತೇಕ ವಚನಗಳಲ್ಲಿ ಪೌರಾಣಿಕವಾಗಿ ಶಿವಭಕ್ತರ ಪವಾಡಗಳ ಬಗ್ಗೆ ಉಲ್ಲೇಖಿಸಿರುವುದು ವಿಶಿಷ್ಟವಾಗಿದೆ.

ಮೌಢ್ಯತೆಯ ವಿರುದ್ಧ ಬಾಚರಸರು

ಸೊಡ್ಡಳಬಾಚರಸರು ಈ ಚಂದ್ರಾಬಲ, ತಾರಾಬಲಗಳೆಂದು ಮೌಢ್ಯತೆಯಲ್ಲಿ ನಂಬಿಕೆಯಿಟ್ಟು ಬಾಳುವವರಿಗೆ ಮನವರಿಕೆ ಮಾಡಿಸುವಂಥ ವಚನಗಳನ್ನು ಕಾಣಬಹುದು.

ಚಂದ್ರಬಲ ತಾರಾಬಲವೆಂಬಿರಿ ಎಲೆ ಅಣ್ಣಗಳಿರಾ !
ಚಂದ್ರಂಗೆ ಯಾರ ಬಲ ? ಇಂದ್ರಂಗೆ ಯಾರ ಬಲ ?
ಇಂದ್ರಂಗೆ, ಮುಕುಂದಂಗೆ, ಬ್ರಹ್ಮಂಗೆ,
ಚಂದ್ರಶೇಖರ ದೇವಸೊಡ್ಡಳನ ಬಲವು, ಕೇಳಿರಣ್ಣಾ.

ಸೃಷ್ಟಿ, ಲಯಗಳಿಗೆ ಕಾರಣವಾಗುವ ದೈವಂಗಳು ಬ್ರಹ್ಮ, ವಿಷ್ಣು, ಮಹೇಶ್ವರರೆಂಬುದು ಜನಪ್ರಿಯ ರೂಢಿಯ ನಂಬಿಕೆಯಾಗಿದೆ. ಆದರೆ ವಿಷ್ಣು, ಬ್ರಹ್ಮ, ಇಂದ್ರರು ಕೂಡ ಆ ಪರಾತ್ಪರ ಪರಮಾತ್ಮನೆಂಬ ದಿವ್ಯಶಕ್ತಿಯನ್ನೇ ತಮ್ಮ ಬಲವಾಗಿಸಿಕೊಂಡವರು. ತಾವೇ ಸರ್ವಶ್ರೇಷ್ಠರೆಂಬ ಅಹಂಕಾರ ಅವರಲ್ಲಿ ತಲೆದೋರಿದ ಸಂದರ್ಭದಲ್ಲಿ ಆ ಪರಶಿವನಿಂದ ಪರಾಜಿತರಾಗಿ, ತಮ್ಮೊಳಗಿರುವ ಅಹಂ ನೀಗಿಸಿಕೊಂಡಾಗಲೇ ಅವರ ಭಕ್ತಿಬಲ ಹೊತ್ತು ಸಾರ್ಥಕ್ಯ ಪಡೆದರು. ಪರಮಶಕ್ತಿಯ ದೈವವ ಬಿಟ್ಟು ಅಧೀನ ಶಕ್ತಿಯುಳ್ಳ ದೈವಗಳಲ್ಲಿನ ನಂಬಿಕೆಯಿಂದ ಯಾವುದೇ ರೀತಿಯ ಬಲವಾಗಲಿ, ಬೆಂಬಲವಾಗಲಿ ದೊರೆಯಲಾರದು ಎಂಬ ಅರಿವು ಈ ವಚನದಿಂದ ಮೂಡುತ್ತದೆ.

ವಿಪ್ರರ ಡಾಂಭಿಕತೆಯ ಬಗ್ಗೆ ಮತ್ತು ಅವರ ಜಾತಿ ದ್ವೇಷದ ಬಗ್ಗೆ ವಚನಕಾರರ ಅಭಿಪ್ರಾಯವನ್ನು ಆ ದ್ವಿಜರ ಟೊಳ್ಳುತನವನ್ನು, ಭ್ರಮೆಯನ್ನು ಸೊಡ್ಡಳ ಬಾಚರಸರು ಸಮರ್ಥವಾಗಿ ಸಾರುವ ನಿಟ್ಟಿನಲ್ಲಿ 'ಆತ್ಮಂಗೆ ಆವ ಕುಲವುಂಟು ಹೇಳಿರೋ?' ಎಂಬ ಪ್ರಶ್ನೆಯನ್ನು ಕೇಂದ್ರವಾಗಿಟ್ಟುಕೊಂಡು

ಬ್ರಾಹ್ಮಣ್ಯದ ಬಗೆಗೆ ಹೊಸ ವಿವರಣೆ ನೀಡುತ್ತಾ, ಶಿವನ್ಯಾರೆಂಬುದನ್ನು ಸ್ಪಷ್ಟವಾಗಿ ವಿವರಿಸಿದ್ದಾರೆ.

ಬಾಹ್ಮಣನು ಅಧಿಕವೆಂದೆಂಬಿರಿ ಭೋ, ಆ ಮಾತದು ಮಿಥ್ಯ. ಬ್ರಾಹ್ಮನಾರೆಂದರಿಯಿರಿ, ಬ್ರಾಹ್ಮಣನೆ ಶಿವನು. 'ವರ್ಣಾನಾಂ ಬ್ರಾಹ್ಮಣೋ ದೈವಃ'ವೆಂಬುದು ನಿಶ್ಚಯ. ಆ ವರ್ಣಭಾವವೆಂದಡೆ ಬ್ರಹ್ಮ ವಿಷ್ಣು ಮಹೇಶ್ವರ ಇಂದ್ರ, ಈ ನಾಲ್ವರು ಜಾತಿವರ್ಗಕ್ಕೆ ಸಲುವರು. ಇಂತೀ ವರ್ಣಂಗಳೆಲ್ಲಕ್ಕೆ ಶಿವನೆ ಗುರು. ಆ ಸದಾಶಿವನ ಗುರುತ್ವಕ್ಕೆ ಏನು ಲಕ್ಷಣವೆಂದರೆ: ಸರ್ವಭೂತಂಗಳೊಳಗೆ ಚೈತನ್ಯಾತ್ಮಕನಾಗಿಹನು. ಅದೆಂತೆಂದಡೆ: 'ಅಣೋರಣೆಯಾನ್ಮಹತೋ ಮಹಿಯಾನ್' ಎಂದುದಾಗಿ 'ಆತ್ಮನಾ ಪೂರಿತಂ ಸರ್ವಂ' ಎಂದುದಾಗಿ, 'ಆತ್ಮನಾಂ ಪತಯೆ' ಎಂದುದಾಗಿ, 'ಆತ್ಮಾಂ ಅವರ್ಣಂ ಚ 'ಆತ್ಮಂ ಆಮೂರ್ತಯೆ' ಆತ್ಮಂ ಚಿದಂ ಕರ್ಮ ಆತ್ಮಮಕುಲಂ ಯಥಾ ಆತ್ಮಾಂ ಪೂರಿತೋ ದೇವಾಯನಮಃ. ಆತ್ಮಾ ರುದ್ರಂ ಭವತಿ ಆತ್ಮಾಸದಾಶಿವಾಂ ಶೋಯೇ ತದ್ಭೂತಾಯ' ಎಂದುದಾಗಿ ಆತ್ಮಂಗೆ ಯಾವ ಕುಲವುಂಟು ಹೇಳಿರೊ? ಅಂತು ಆತ್ಮನು ಸರ್ವಭೂತಂಗಳಿಗೆ ಗುರುವೆಂದೆನಿಸಿಕೊಂಬ ಆತ್ಮಂಗೆ, ಗುರು ಸದಾಶಿವನು. ಆಯಾತ್ಮನು ಸದಾಶಿವನ ಕೂಡಲಿಕ್ಕೆ ಚೈತನ್ಯಾತ್ಮಕನಾಗಿ, ಸರ್ವವೂ ಸದ್ಗುರುವೆನಿಸಿಕೊಂಬ 'ವರ್ಣಾನಾಂ ಬ್ರಾಹ್ಮಣೋ ಗುರುಃ' ಎಂಬ ಶ್ರುತಿಯನರಿದು, ದ್ವಿಜರು ತಾವು ಗುರುತನದನ ಲಕ್ಷಣ ಬೇಡಾ. ಗುರುವಾದಡೆ ಸಕಲವನು ಕೂಡಿಕೊಂಡಿರಬೇಡಾ. ತಾವು ಗುರುವಾದಡೆ ಕುಲ ಅಕುಲಂಗಳುಂಟೆ ? ವರ್ಣ ಅವರ್ಣಂಗಳುಂಟೆ ? ಎಂತು, ಕುಲದೊಳಗೆ ಇದ್ದು, ಆ ಕುಲದ ಮಾತನಾಡುವ ದ್ವಿಜಭ್ರಮಿತರನೇನೆಂಬೆ ಸೊಡ್ಡಳಾ?

ಸರ್ವಭೂತಗಳೊಳಗೆ ಚೈತನ್ಯಾತ್ಮಕನಾದ ಶಿವನು ಕುಲ ಗೋತ್ರರಹಿತ ನಾಗಿದ್ದಾನೆ. ಅವನು ಬ್ರಹ್ಮ, ವಿಷ್ಣು, ರುದ್ರ ಇವರಿಗೆ ಅತೀತನಾಗಿದ್ದಾನೆ. ಇಂಥ ಶಿವನನ್ನು ಅರಿತವನೇ ನಿಜವಾದ ಶ್ರೇಷ್ಠನು ಎಂದು ವಚನಕಾರರು ವಿವರಿಸಿದ್ದಾರೆ. ಅವರು ಶಿವ ಎಂದರೆ ಪಂಚಮುಖ, ದಶಮುಖವುಳ್ಳವನೆಂದು

ಭಾವಿಸಿರುವುದಿಲ್ಲ. ಶಿವ ಎಂದರೆ ಪರಬ್ರಹ್ಮ ಪರಾತ್ಪರ ಚೈತನ್ಯಾತ್ಮಕವಾದ ಪರವಸ್ತು ಎಂದು ಭಾವಿಸುತ್ತಾರೆ.

ಶರಣರು ಈ ಸೃಷ್ಟಿಯೆಂಬುದೊಂದು ಪರಶಿವನ ಲೀಲೆ ಎಂಬ ಸಿದ್ಧಾಂತವನ್ನು ಅಂಗೀಕರಿಸುತ್ತಾರೆ. 'ಪ್ರಾರಂಭದಲ್ಲಿ ಸರ್ವಶೂನ್ಯ ನಿರಾಲಂಬ ಸ್ಥಿತಿಯಲ್ಲಿದ್ದ ಶಿವ, ನಿರಂಜನ ಬ್ರಹ್ಮನಾಗಿ ಪರಿಣಮಿಸಿದ. ಈ ನಿರಂಜನ ಬ್ರಹ್ಮನಲ್ಲಿ ಉಂಟಾದ ನೆನಹು, ಇದೇ 'ಮಹಾಜ್ಞಾನ ಚಿತ್ತು' ಎಂಬುದು ಅಂಗವಾಗಿ ಪರಿಣಮಿಸಿತು. ಈ ಶೂನ್ಯಲಿಂಗದಿಂದ ಜ್ಞಾನಚಿತ್ತನ್ನು ಅಂಗವಾಗುಳ್ಳ ನಿಷ್ಕಲ ಬ್ರಹ್ಮ ಉದ್ಭವಿಸಿತು. ಆ ನಿಷ್ಕಲ ಬ್ರಹ್ಮ, ತನ್ನ ಜ್ಞಾನಚಿತ್ತುವಿನ ಸಹಾಯದಿಂದ ಚಿನ್ನಾದ, ಚಿದ್ಬಿಂದು, ಚಿತ್ಕಲೆ ಇವುಗಳಿಗೆ ಕಾರಣವಾಯಿತು. ಇವು ತಮ್ಮ ಮೂಲಕ ಶಕ್ತಿಯಾದ ಜ್ಞಾನ ಚಿತ್ತುವಿನೊಡನೆ ಸೇರಿ, ಆ ನಾಲ್ಕು ಒಟ್ಟುಗೂಡಿ ಓಂಕಾರವೇ ಪೀಠವಾದ ಮಹಾಲಿಂಗವಾಗಿ ಪರಿಣಮಿಸಿತು. ಈ ಸೃಷ್ಟಿಯ ಸಚರಾಚರಗಳ ವರ್ಣವಿಶೇಷಗಳಿಗೆ ಕಾರಣನಾದ ಶಿವನೇ ಎಲ್ಲದಕ್ಕೂ ಗುರುಸ್ಥಾನದಲ್ಲಿರುವವನು ಹೊರತು, ವೈದಿಕ ಕಲ್ಪನೆಯ ಬ್ರಹ್ಮನಾಗಲಿ, ವಿಷ್ಣುವಾಗಲಿ, ರುದ್ರನಾಗಲಿ ಪರಮಾಧಿಕಾರ ಹೊಂದಿಲ್ಲ. ಸೃಷ್ಟಿಯ ಅಣು ಅಣುವಿನಲ್ಲಿಯೂ ಸದಾಶಿವನು ಆತ್ಮರೂಪದಲ್ಲಿ ನೆಲೆಸಿದ್ದಾನೆ. ಹೀಗಿರುವಾಗ ಈ ಆತ್ಮನನ್ನು ನಿರ್ಧಿಷ್ಟವಾದ ಮಾನವನ ಮನೋರಚನೆಗಳಾದ ಕುಲ, ಜಾತಿ, ವರ್ಣ, ವರ್ಗ ಎಂದು ಜೀವಿಗಳ ಮಧ್ಯೆ ವಿಭಾಗಿಸಿ ಸೀಮಿತಗೊಳಿಸಲಾಗದೆಂದು ಸೊಡ್ಡಳ ಬಾಚರಸರು ನಿರೂಪಿಸಿದ್ದಾರೆ.

ಭಕ್ತಿಯ ಹೆಸರಿನಲ್ಲಿ ಸ್ವಾರ್ಥ ಸಾಧನೆ ಮಾಡುತ್ತ ಪರರನ್ನೂ ತನ್ನನ್ನೂ ವಂಚಿಸುವ ಎರಡೂ ರೀತಿಯಲ್ಲಿ ನಡೆಯುವ ಅಪರಾಧಕ್ಕೆ ಸೊಡ್ಡಳದೇವ ಶಿಕ್ಷೆ ವಿಧಿಸಲಾರದೆ ಬಿಡುವುದಿಲ್ಲ ಎನ್ನುತ್ತಾರೆ. ಅಪರಾಧದ ಬೇರು ಬಿಳಲುಗಳು ಒಂದಕ್ಕೊಂದು ಹೆಣೆದುಕೊಂಡು ಪರಸ್ಪರ ಪೂರಕ ಸಂಬಂಧ ಜಾಲವನ್ನು ಹೊಂದಿರುತ್ತವೆ. ಅಪರಾಧದ ಮೂಲದ ನೆಲೆಯನ್ನರಿಯದೆ ರೆಂಬೆಕೊಂಬೆ ಕತ್ತರಿಸಿದರೆ ಪ್ರಯೋಜನವಿಲ್ಲ. ಇಡೀ ವ್ಯವಸ್ಥೆಯೇ

ಭ್ರಷ್ಟಗೊಂಡಿರುವಾಗ ಅದನ್ನು ಬುಡಮೇಲು ಮಾಡುವ ಪ್ರಭಂಜನ ಕಾರ್ಯ ಅತ್ಯಗತ್ಯವಾಗುತ್ತದೆ. ಆ ಕಾರ್ಯದ ಚಾಲಕಶಕ್ತಿಯಾಗಿ ಪ್ರಳಯಕಾಲದ ಸೊಡ್ಡಳನಿದ್ದಾನೆ, ಎಂಬ ಭಾವ ಬಾಚರಸರದು.

ವೇದ, ಶಾಸ್ತ್ರ, ಆಗಮ ಇವುಗಳನ್ನು ಸಹ ಮೌಢ್ಯತೆಯಿಂದ ಸ್ವೀಕರಿಸಬಾರದು. ಈ ವೇದ ಶಾಸ್ತ್ರ ಆಗಮಗಳು ಶುಷ್ಕ ಪ್ರದರ್ಶನಗಳೇ ಹೊರತು ಆತ್ಮದರ್ಶನಕ್ಕೆ ದಾರಿಯಾಗಲಾರವು ಎಂಬುದನ್ನು ಸೊಡ್ಡಳ ಬಾಚರಸರು ಶರಣರ ಬದುಕಿನ ನಡೆಯ ಹಿನ್ನೆಲೆಯಲ್ಲಿ ಹೀಗೆ ತೋರಿಸುತ್ತಾರೆ.

ವೇದಂಗಳು ನಿಜವ ಬಲ್ಲಡೆ, ವಟ್ಟಂಕುರರ ಮರೆಯಬೇಕಲ್ಲದೆ,
ಚನ್ನಯ್ಯ ಕಕ್ಕಯ್ಯಗಳ ಮೆರೆಯಲೇಕೆ?
ಶಾಸ್ತ್ರಂಗಳು ಸತ್ಯವ ನುಡಿದಡೆ, ಶಾಸ್ತ್ರಂಗಳ ಮಾತಿಂಗೆ ಹೇಸಿ,
ಕಿರಾತಬೊಮ್ಮಣ್ಣಂಗಳ ಮೆರೆಯಲೇಕೆ ?
ಆಗಮಂಗಳು ಆಚಾರವನರಿದಡೆ, ಆಗಮಂಗಳ ಮೆರೆಯದೆ,
ಕೆಂಭಾವಿಯ ಭೋಗಣ್ಣಗಳ ಹಿಂದುರುಳುತ್ತ ಹೋಗಿ ಮರೆಯಲೇಕೆ?
ಇಂತೀ ವೇದಶಾಸ್ತ್ರಾಗಮಂಗಳು ಶಿವಾನಾದಿಯಂತರವನರಿದಡೆ,
ಸಾಮವೇದಿಗಳು ಶ್ವಪಚಯ್ಯಂಗೆ ಶಿಷ್ಯನಾಗಲೇಕೆ ?
ವಾದಿಸಿದರೆಲ್ಲರು ಪ್ರತಿವಾದಿಗಳಾದರು ನಿಮ್ಮಂತವನರಿಯದೆ.
ಅಭೇಧ್ಯವು, ಘನಕ್ಕೆ ಘನವು, ಶಂಭು ಸೊಡ್ಡಳಾ.

ಶರಣರು ನುಡಿದಂತೆ ನಡೆಯುವವರಿಗೆ ಮಹತ್ವವನ್ನು ಕೊಡುತ್ತಾರೆ. ಬರೀ ಮಾತಿಗೆ ಮಹತ್ವ ಕೊಡುವುದಿಲ್ಲ. ಉನ್ನತ ನಡತೆಯುಳ್ಳವರಲ್ಲಿ ಅವರು ಜಾತಿಭೇದವನ್ನು ಎಣಿಸಲಾರರು. ಕೀಳುಕುಲದವನಿಗೆ ಕೂಡ ಮೋಕ್ಷಮಾರ್ಗವು ತೆರೆದಿರುತ್ತದೆ ಎಂದು ತೋರಿಸಿಕೊಟ್ಟರು. ಅಂತೆಯೇ ಚನ್ನಯ್ಯ, ಕಕ್ಕಯ್ಯ, ಕಿರಾತಬೊಮ್ಮಣ್ಣ, ಕೆಂಭಾವಿ ಭೋಗಣ್ಣ, ಶ್ವಪಚಯ್ಯರು ಅಸ್ಪೃಶ್ಯ ಕುಲವೆಂದು ಪರಿಗಣಿತವಾದ ಸಾಮಾಜಿಕ ಸ್ತರಕ್ಕೆ ಸೇರಿದ ಭಕ್ತರು, ಶುದ್ಧಶೈವದ ಬಾಹ್ಯ ಕರ್ಮಕಾಂಡವನ್ನು ಧಿಕ್ಕರಿಸಿ ಅಂತರಂಗದ ಭಕ್ತಿಸಾಧನೆಯನ್ನು ಬಸವಧರ್ಮ ಎತ್ತಿ ಹಿಡಿಯಿತು. ವೈದಿಕ ಪಟ್ಟಭದ್ರ

ಪೀಠಗಳನ್ನು ಬುಡಮೇಲು ಮಾಡಿ ಸಮಾನತೆಯ ವ್ಯವಸ್ಥೆ ತರುವ ಕಾರ್ಯಕ್ಕೆ ಬೆಂಬಲವಾಗಿ ನಿಂತಿತು. ಬಸವ ಧರ್ಮಕ್ಕೆ ಗಟ್ಟಿಯಾದ, ಅನುಭವ ಮತ್ತು ಅನುಭಾವ ಒಳಗೊಂಡ ಭದ್ರ ಬುನಾದಿ ಒದಗಿಸುವಲ್ಲಿ ತಳವರ್ಗದ ಶರಣರು ಸಾಮಾಜಿಕವಾಗಿ ವಹಿಸಿದ ಪಾತ್ರ ಮಹತ್ವದ್ದಾಗಿದೆ.

ಶತಮಾನಗಳಿಂದ ತಳವರ್ಗದ ಧಾರ್ಮಿಕ ಸಾಧನೆಗೆ ಹೆಬ್ಬಂಡೆಯಾಗಿ ನಿಂತಿದ್ದ ವೈದಿಕ ಕರ್ಮಕಾಂಡ ಆಚರಣೆಗಳಿಗೆ ಸಿಡಿಮದ್ದಾಗಿ ನಿಂತಿರುವ ಶರಣರ ಬದುಕು ಲೌಕಿಕ ಚರಿತ್ರೆಗೆ ಸಾಕ್ಷಿ ಆಧಾರಗಳಿಲ್ಲದ ಪವಾಡವೆನಿಸುವುದು ಸಹಜ. ಆದರೆ ವೇದಶಾಸ್ತ್ರಾಗಮಂಗಳಲ್ಲಿ ಜಾತಿ ಭೇದವನ್ನೆಣಿಸಬೇಕೆಂದು ಉಕ್ತಿಗಳಿವೆ. ಅವುಗಳನ್ನು ಅಂಧತೆಯಿಂದ ಅನುಸರಿಸಬಾರದೆಂದು, ಸವಾಲು ಹಾಕಿದ ಶರಣರ ನಿರ್ಭಿತ ನಡೆ ಪ್ರಕಾಶಮಾನವಾಗಿದೆ.

ಶರಣರು ವೇದ ಆಗಮಗಳನ್ನು ಸ್ಪಷ್ಟ ಬೌದ್ಧಿಕ ನೆಲೆಯಲ್ಲಿ ವಿಮರ್ಶಿಸಿ ತಿರಸ್ಕರಿಸಿದರು. ಕರ್ಮಕಾಂಡಗಳಲ್ಲಿ ತೊಡಗುತ್ತ ಶುಷ್ಕ ಆಚರಣೆಗಳನ್ನೇ ಧಾರ್ಮಿಕ ಶ್ರೇಷ್ಠತೆಯಾಗಿ ಸ್ಥಾಪಿಸುವ ವೈದಿಕ ಧಾರೆಯನ್ನು ತಿರಸ್ಕರಿಸಿ ಖಂಡಿಸುವಲ್ಲಿ ಸೊಡ್ಡಳ ಬಾಚರಸರು ಕೂಡ ಎದ್ದು ನಿಂತಿರುವುದನ್ನು ಕಾಣಬಹುದು.

ವೇದದವರನೊಲ್ಲದೆ ನಮ್ಮ ಮಾದಾರ ಚನ್ನಯ್ಯಂಗೊಲಿದ.
ಶಾಸ್ತ್ರದವರನೊಲ್ಲದೆ ಶಿವರಾತ್ರಿಯ ಸಂಕಣ್ಣಂಗೊಲಿದ.
ಆಗಮದವರನೊಲ್ಲದೆ ತೆಲುಗುಜೊಮ್ಮಯ್ಯಂಗೊಲಿದ.
ಪುರಾಣಕರ್ಮಿಗಳೆಂಬ ವಿಶಿಷ್ಟಬ್ರಹ್ಮರನೊಲ್ಲದೆ ಉದ್ಭಟಯ್ಯಂಗೊಲಿದ.
ಅಣ್ಣ ಕೇಳಾ ಸೋಜಿಗವ !
ದಾಸದುಗ್ಗಳೆಯರಿಗೊಲಿದ ಮುಕ್ಕಣ್ಣ ಸೊಡ್ಡಳ,
ಹಾರುವಣ್ಣಗಳಿಗೆ ಹೇಸಿ ಕದವನಿಕ್ಕಿಕೊಂಡನು.

ವೇದಮಾರ್ಗಕ್ಕೆ ಹೊರತಾದ ಭಕ್ತಿ ಮಾರ್ಗದ ಪರಂಪರೆಯ ಮಾದಾರ ಚನ್ನಯ್ಯ, ಶಿವರಾತ್ರಿಯ ಸಂಕಣ್ಣ, ತೆಲಗು ಬೊಮ್ಮಯ್ಯ,

ಉದ್ಭಟಯ್ಯ, ದಾಸಿಮಯ್ಯ, ದುಗ್ಗಳೆಯರಂತಹ ಭಕ್ತ ಶ್ರೇಷ್ಠರನ್ನು ಸೊಡ್ಡಳ ದೇವರಾಯನು ಒಲಿಯುತ್ತಾನೆ ಎಂದು ಬಾಚರಸರು ತಿಳಿಸಿದ್ದಾರೆ.

ಬಾಚರಸರ ವಚನಗಳಲ್ಲಿ ಪೌರಾಣಿಕತೆಯ ಬಯಲು

ಸೊಡ್ಡಳ ಬಾಚರಸರು ಪೌರಾಣಿಕವಾಗಿ ಬರುವ ಕಥೆಗಳನ್ನು ತರ್ಕಬದ್ಧವಾಗಿ ಪ್ರಶ್ನಿಸಿದಂತಿದೆ.

ವಿಷ್ಣು ಪರಿಪೂರ್ಣನಾದಡೆ, ಸೀತೆ ಕೆಟ್ಟಳೆಂದು ಅರಸಲೇಕೊ ?
ವಿಷ್ಣು ಪರಿಪೂರ್ಣನಾದಡೆ, ವಟಪತ್ರದ ಮೇಲೆ ಕುಳಿತು,
ಜಲಪ್ರಳಯದಲ್ಲಿ ಅಡಗಿದನೆಂಬ ಮಾತೇಕೋ ?
ವಿಷ್ಣುವಿನ ಬಾಣ ಸಮುದ್ರಕಡ್ಡಕಟ್ಟೆಯಾದಡೆ,
ಕಪಿ ಕೋಡಗವ ಹಿಡಿತಂದು,
ಬೆಟ್ಟಗಟ್ಟಂಗಳ ಹಿಡಿತಂದು, ಸೇತುವೆಯ ಕಟ್ಟಲೇಕೋ ?
ವಿಷ್ಣು ಪರಿಪೂರ್ಣನಾದಡೆ, ರಾವಣನ ವಧೆಗಂಜಿ,
ಧರೆಯ ಮೇಲೆ ಲಿಂಗಪ್ರತಿಷ್ಠೆಗಳ ಮಾಡಿ ಪೂಜಿಸಲೇಕೋ ?
ಇಂತು ಬ್ರಹ್ಮಾಂಡದೊಳಗೆ ಸಿಕ್ಕಿ.
ಸತ್ತುಹುಟ್ಟುತ್ತಿಹ ದೇವತೆಗಳು ಒಬ್ಬರೂ ಪರಿಪೂರ್ಣರಲ್ಲ.
ಮಹಾದಾನಿ ಸೊಡ್ಡಳನೊಬ್ಬನೆ ಪರಿಪೂರ್ಣನು.

ವಿಷ್ಣುವಿನ ಅವತಾರ ಪುರುಷನೆಂದು ಶ್ರೀರಾಮ ಪರಿಗಣಿತನಾದ ಕಾರಣ ಆತನಿಗೆ ಮಾನವ ಪರಿಮಿತಿಗಳಿವೆ. ರಾಮಾವತಾರದಲ್ಲಿ, ರಾವಣನಿಂದ ಅಪಹೃತಳಾದ ಸೀತೆಯನ್ನು ಹುಡುಕಲು ವಾನರ ಸೇನೆಯ ಪ್ರಮುಖರಾದ ಸುಗ್ರೀವಾದಿಗಳೆಲ್ಲರ ಸಹಾಯವು ವಿಷ್ಣುವಿಗೆ ಬೇಕಾಯಿತು. ಸೀತೆ ಅಪಹೃತಳಾದಾಗ, ಆಕೆಯನ್ನು ಮರಳಿ ಪಡೆಯಲು ಇತರರ ಸಹಾಯ ಪಡೆಯಬೇಕಾಯ್ತು. ಹೀಗಿದ್ದೂ ವಿಷ್ಣುವನ್ನು ಸರ್ವಶಕ್ತ, ಪರಿಪೂರ್ಣ ಎಂದು ಹೇಳಲು ಹೇಗೆ ಸಾಧ್ಯ ? ಎಂದು ಬಾಚರಸರು ಪ್ರಶ್ನಿಸುತ್ತಾರೆ. ಅಂತೆಯೇ ಜಲಪ್ರಳಯದ ಸನ್ನಿವೇಶದಲ್ಲಿ ಕೃಷ್ಣಾವತಾರಿ ವಿಷ್ಣುವು, ಆಲದೆಲೆಯ ಮೇಲೆ ಪವಡಿಸಿದ ಬಾಲಗೋಪಾಲನಾಗಿದ್ದುದನ್ನು ಸೊಡ್ಡಳ

ಬಾಚರಸರು ನೆನಪಿಸಿಕೊಳ್ಳುತ್ತಾರೆ. ಸೀತೆಯನ್ನು ಮರಳಿ ಪಡೆಯಲು ರಾವಣನೊಡನೆ ಶ್ರೀರಾಮನು ಯುದ್ಧ ಮಾಡಲು ಸಮುದ್ರದಾಟಿ ಹೊರಡಬೇಕಾದ ಸಂದರ್ಭದಲ್ಲಿ ವಾನರ ಸೇನೆಯ ಸಹಾಯ ಪಡೆಯ ಬೇಕಾಗುತ್ತದೆ. ಸರ್ವಶಕ್ತನೆಂದೆನಿಸಿಕೊಳ್ಳುವ ವಿಷ್ಣುವಿಗೆ ಹೀಗೆ ಇತರರ ಸಹಾಯ ಪಡೆಯುವ ಅನಿವಾರ್ಯತೆ ಒದಗಿದುದೇ ಅವನು ಶಕ್ತಿಹೀನನೂ ಅಪರಿಪೂರ್ಣನೂ ಎಂಬುದಕ್ಕೆ ಸಾಕ್ಷಿಯೆಂಬ ನಿಲವು ಸೊಡ್ಡಳ ಬಾಚರಸರದು.

ವಿಷ್ಣುವು ತಾನೇ ಸ್ವತಃ ದೇವರಾಗಿರುವಾಗ ಮತ್ತೆ ರಾಮಾವತಾರದಲ್ಲಿ, ರಾವಣ ವಧೆಯ ದೋಷಕ್ಕೆ ಪ್ರಾಯಶ್ಚಿತ್ತವೆಂಬಂತೆ ಲಿಂಗಪ್ರತಿಷ್ಠಾಪಿಸಿ ಪೂಜಿಸುವ ಕಾರಣವೇನು? ಹೀಗೆ ವಿಷ್ಣುವಿನ ವಿವಿಧ ಅವತಾರಗಳಲ್ಲಿನ ಪರಿಪೂರ್ಣತ್ವ ಹಾಗೂ ಸರ್ವಶಕ್ತತೆಯ ಮಾದರಿ ಇಂಥ ಅಪಹಾಸ್ಯಕ್ಕೆ ಒಳಗಾಗುವುದನ್ನು ಈ ವಚನ ಚೆನ್ನಾಗಿ ಮನವರಿಕೆ ಮಾಡಿಕೊಡುತ್ತದೆ. ಸತ್ತು ಹುಟ್ಟುತ್ತಿರುವ ಇಂಥ ಅಪೂರ್ಣ ದೇವತೆಗಳಲ್ಲಿ ಶರಣಾಗತಿ ಹೊಂದುವುದಕ್ಕಿಂತ ಪರಿಪೂರ್ಣನೆನಿಸಿದ 'ಮಹಾದಾನಿ ಸೊಡ್ಡಳ'ನಲ್ಲಿ ಸರ್ವ ಸಮರ್ಪಣಗೊಳ್ಳುವುದೇ ಶ್ರೇಯಸ್ಕರ ಎಂಬ ನೆಲೆಯಲ್ಲಿ ಈ ವಚನದ ಸಾರಾಂಶವಿದೆ.

ಬಸವಣ್ಣನವರ ಸಮಕಾಲೀನರಾದ ಸೊಡ್ಡಳ ಬಾಚರಸರಿಗೆ ಶರಣರ ಆಂದೋಲನದಲ್ಲಿ ಪ್ರಮುಖ ಸ್ಥಾನವಿತ್ತೆಂಬುದರಲ್ಲಿ ಸಂದೇಹವೇ ಇಲ್ಲವೆನಿಸುತ್ತದೆ. ಸೊಡ್ಡಳ ಬಾಚರಸರ ಬದುಕಿನ ಸಂಘರ್ಷಮಯ ಸ್ಥಿತಿ ಯನ್ನು ಗಮನಿಸಿದರೆ, ಅವರ ಪ್ರತಿಷ್ಠಿತ ಸಾಂಸ್ಥಿಕ ಅಧಿಕಾರ ಶಕ್ತಿಗಳೊಂದಿಗೆ ನೇರ ಮುಖಾಮುಖಿ ಉಳ್ಳವರೆಂದು ಬಾಚರಸರ ಸುತ್ತ ಹೆಣೆದ ಪವಾಡಸದೃಶ ಕಥನಗಳು ಸ್ಪಷ್ಟವಾಗಿ ಸೂಚಿಸುತ್ತವೆ. ವೇದೋಪನಿಷತ್ತು, ಶೈವಾಗಮನಗಳ ಜ್ಞಾನವನ್ನು ಸೊಡ್ಡಳ ಬಾಚರಸರು ತಳಸ್ಪರ್ಶಿಯಾಗಿ ಹೊಂದಿರುವುದು ಬಾಚರಸರ ವಚನಗಳ ಮೂಲಕ ವ್ಯಕ್ತವಾಗುತ್ತದೆ.

ಅನುಭಾವದ ರಹಸ್ಯವನ್ನು ನಿಶ್ಶಬ್ದದಲ್ಲಿ ಹಿಡಿದಿಡುವ ಭಕ್ತರ ಪರಿಯೇ ಬೇರೆ. ಬಾಚರಸರು ತನ್ನೊಳಗಿನ ಧಾರ್ಮಿಕ ತಾತ್ವಿಕ ಜ್ಞಾನವನ್ನು

ಅರಗಿಸಿಕೊಂಡು ಅದನ್ನು ಸ್ವವಿಮರ್ಶೆಯ ಬೆಳಕಿನಲ್ಲಿ ಒರೆಹಚ್ಚುವ ಚಿಂತನೆಯನ್ನು ಸೈದ್ಧಾಂತೀಕರಿಸಿ ವ್ಯವಸ್ಥೆಗೊಳಿಸುವ ಗುರುತರ ಹೊಣೆಗಾರಿಕೆ ಹೊತ್ತಿರುವುದಕ್ಕೆ ಸೊಡ್ಡಳ ಬಾಚರಸರ ವಚನಗಳೆ ಸಾಕ್ಷಿಯಾಗಿವೆ.

ಲಿಂಗಾಂಗ ಸಾಮರಸ್ಯದಲಿ ಬಾಚರಸರು

ಈ ಮಾಯೆ ಎಂಬುದು ಹೊರಗಿನ ಕಾರಣವಲ್ಲ. ಅದರ ಮೂಲವು ವ್ಯಕ್ತಿಯ ಪ್ರಜ್ಞೆಯೆ ಆಗಿರುತ್ತದೆ. ವ್ಯಕ್ತಿ ತನ್ನೊಳಗಿನ ಅರಿವಿನ ಮೂಲಕವೇ ಹೊರಗೆ ಇರುವ ವಸ್ತಗಳ ಪ್ರಪಂಚದತ್ತ ತನಗರಿವಿಲ್ಲದೆ ಭ್ರಮಾತ್ಮಕ ಲೋಕದ ಕಡೆ ಸಾಗದೆ ಇರಬೇಕು. ಹೊನ್ನು, ಹೆಣ್ಣು, ಮಣ್ಣಿನ ಹಂಬಲಕ್ಕೆ ಒಳಗಾದ ಜೀವದ ತನು ಮನಗಳು ವಿಕಾರಗೊಳ್ಳುತ್ತವೆ. ಜ್ಞಾನೇಂದ್ರಿಯ ಎನಿಸುವ ಕಣ್ಣು ಈ ವಿಕಾರಕ್ಕೊಳಗಾದಾಗ ಆ ಜೀವಿಗೆ ಯಾವ ಮೌಲಿಕ ಅನುಭವವೂ ಆಗುವುದಿಲ್ಲವೆಂದು ಸೊಡ್ಡಳ ಬಾಚರಸರು ತನು-ಮನ ವಿಕಾರಕ್ಕೆ ಮದ್ದನ್ನು ಸೂಚಿಸುತ್ತಾರೆ.

ತನುವಿಕಾರ, ಮನವಿಕಾರ, ಜನನ ಮರಣಸ್ಥಿತಿ ಕಾರಣ
ಹೊನ್ನ ತೋರಿದೆ, ಜಗದ ಕಣ್ಣ ಮೊದಲಿಗೆ
ಹೆಣ್ಣ ಸುಳಿಸಿದೆ, ಜಗದ ಕಣ್ಣ ಮೊದಲಿಗೆ
ಮಣ್ಣ ಹರಹಿದೆ, ಜಗದ ಕಣ್ಣ ಮೊದಲಿಗೆ.
ತನುವ ತಪ್ಪಿಸಿ, ಜಗವ ಸಂಸಾರಕೊಪ್ಪಿಸಿ,
ನುಣ್ಣನೆ ಹೋದನುಪಾಯದಿ ದೇವರಾಯಸೊಡ್ಡಳ.

ಪ್ರತಿಯೊಬ್ಬ ಜೀವಿಯು ತನ್ನ ಎಲ್ಲಾ ಸ್ಥಿತಿಗತಿಯನ್ನು ದೈವಲೀಲೆಯ ಪರಿಣಾಮ ಎನ್ನವುದನ್ನು 'ದೇವರಾಯ ಸೊಡ್ಡಳ ತನುವ ತಪ್ಪಿಸಿ, ಜಗವ ಸಂಸಾರಕೊಪ್ಪಿಸಿ ನುಣ್ಣಗೆ ಉಪಾಯದಿಂದಲಿ ಹೊರಹೋದನು.' ಇದನ್ನು ಅರಿಯುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ಸದಾಕಾಲ ಬಹಿರಂಗವಾಗಿ ತುಡಿವ ಮನವನ್ನು ಅಂತರಂಗದ ಕಡೆ ಮನ ಹೊರಳಿಸಿದಾಗ ಅದರಿಂದಾಚೆಗೆ ಬರಲು ಸಾಧ್ಯವಾಗುತ್ತದೆ. ನಿತ್ಯ ದೈನಂದಿನ ಜೀವನ ನಿರ್ವಹಣೆಯು ಕೊನೆ ಮೊದಲಿಲ್ಲದ, ನಿಶ್ಚಿತ ಗುರಿಯಿಲ್ಲದ ಯಾಂತ್ರಿಕ ಕ್ರಿಯೆಗಳಲ್ಲೇ

ಬದುಕು ಕಳೆದು ಹೋಗುತ್ತದೆ. ಜಗದ ಕಣ್ಣ ನೋಟದೊಳಗೆ ಹೆಣೆದುಕೊಂಡು ಸಂಸಾರದ ಬಲೆಯಲ್ಲಿ ತೊಳಲಿ ಬಳಲದೆ ನಾನೆಂಬ ಭ್ರಾಂತಿಯಿಂದ ಹೊರಬರಬೇಕು. ಹೊರಜಗತ್ತಿನಲ್ಲಿ ಕಾಣುವ ಹೆಣ್ಣು, ಹೊನ್ನು, ಮಣ್ಣೆಂಬ ಮಾಯೆ ಅಳಿದು ಕಣ್ಣನ್ನು ಹೊರಳಿಸಿ ಒಳಮುಖವಾಗಿ ನೋಡಿದಾಗ, ಈ ಮಾಯೆಯ ನೈಜ ಸ್ವರೂಪದ ಅರಿವಾಗಿ ತನ್ನದೆಂಬ ತನು-ಮನಗಳು ದೈವ ಸೃಷ್ಟಿಯ ಕೊಡುಗೆಯೆಂಬ ಭಾವ ನೆಲೆಗೊಳ್ಳುತ್ತದೆ. ಬಾಚರಸರ ವಚನಗಳು ಸಾಧನೆ ಮತ್ತು ಸಿದ್ಧಿಯನ್ನು ನಿರೂಪಿಸಿತ್ತವೆ.

ಮಾನವನ ಬದುಕಿನ ಅಸಂಗತತೆಯನ್ನು ಬಾಚರಸರು ಸಾಕ್ಷಿಪ್ರಜ್ಞೆಯಿಂದ ಪರಿಣಾಮಕಾರಿಯಾಗಿ ಹಿಡಿದಿಟ್ಟಿದ್ದಾರೆ.

ಒಂದು ಇಂದ್ರಿಯ ಮೊದಲಾದುದಕ್ಕೆ ಕಡೆಯಿಲ್ಲ.
ಕುಂಜರನು ಸ್ಪರ್ಶೇಂದ್ರಿಯದ ಬಳಿ ಸಂದು,
ಫಣಿರಾಗರಸದಿಂದ, ಭ್ರಮರ ಸೌರಭ್ಯದಿಂದ
ಮತ್ಸ್ಯರುಚಿಯಿಂದ, ಪತಂಗ ರೂಪಿಂದ,
ಒಂದೊಂದು ವಿಷಯದಲ್ಲಿ, ಒಂದೊಂದು ಪ್ರಾಣಿಗಳು ನೊಂದು,
ಬಂಧನಕ್ಕೆ ಬಂದುದನರಿಯಾ.
ಪಂಚೇಂದ್ರಿಯದ ಬೆಂಬಳಿಯಲ್ಲಿ ಹರಿವ ಮನುಜರ ಕೊಂದು,
ಕೂಗದೆ ಮಾಯೆ, ದೇವರಾಯ ಸೊಡ್ಡಳ ನೋಡೆ.

ಅಂಗವನ್ನು ಅಶುದ್ಧಗೊಳಿಸುವ ವಿಕಾರಗಳ ಮೂಲವಾಗಿ ಪಂಚೇಂದ್ರೀಯಗಳಿವೆ. ಇವು ನಿಯಂತ್ರಣದಲ್ಲಿ ಇರಿಸಿಕೊಳ್ಳದೆ, ನಿರಂತರವಾಗಿ ಸುಖಭೋಗದ ಅಪೇಕ್ಷೆಯನ್ನು ಹೊಂದುತ್ತಿರುತ್ತವೆ. ಹಾಗಾಗಿ ಬಾಚರಸರು ಮಾನವ ಜೀವವನ್ನು 'ಪ್ರಾಣಿ' ಜೀವಕ್ಕೆ ಹೋಲಿಕೆ ಮಾಡಿರುವುದನ್ನು ಕಾಣಬಹುದು. ಆನೆಯು ಸ್ಪರ್ಶೇಂದ್ರಿಯದ ಸಂವೇದನೆ ಯಿಂದ ಸುಖವನ್ನು ಹೊಂದಲು ಅಪೇಕ್ಷಿಸಿ ಬಂಧನಕ್ಕೊಳಗಾಗುತ್ತದೆ. ಜಿಂಕೆಯು ಶ್ರವ್ಯೇಂದ್ರಿಯ ಸುಖದಿಂದ ಮೈಮರೆತು ಬಲೆಗೆ ಸಿಲುಕುತ್ತದೆ. ಅರಳುವ ಹೂವಿನ ಸುಗಂಧದ ಸುಖಕ್ಕೆ ಭ್ರಮರ, ಗಾಳದ ಹುಳುವನ್ನು

ಆಹಾರವಾಗಿ ಪಡೆವ ಆತುರಕ್ಕೆ ಮೀನು, ಬೆಳಕಿನ ಆಕರ್ಷಣೆಗೆ ಒಳಗಾಗಿ ಪತಂಗ ಹುಳು ಹೀಗೆ ಮೊದಲಾದ ಜೀವಿಗಳು ವಿಷಯ ವಾಸನೆಯಲ್ಲಿ ಸಿಲುಕಿ ಸುಖದ ಬಯಕೆಯಿಂದಾಗಿ ತಮ್ಮ ಸಾವಿಗೆ ತಾವೇ ಕಾರಣವಾಗುತ್ತವೆ.

ಇನ್ನು ಈ ಐದು ಇಂದ್ರಯಗಳನ್ನು ಹೊಂದಿದ ಮಾನವರಲ್ಲಿ ವಿಷಯಾಸಕ್ತಿಯ ಒಳಹರಿವಿನ ಪ್ರಮಾಣ ಅತ್ಯಧಿಕ ತೀವ್ರತೆ ನಿರಂತರವಾಗಿ ಹರಿಯುವದರ ಪರಿಣಾಮವಾಗಿ ಬಂಧನದ ಸಾಧ್ಯತೆ ಇರುವುದು. ಅದಕ್ಕಾಗಿ ಮಾನವನು ತಮ್ಮ ಇಂದ್ರಯಗಳಿಗೆ ತಾವೇ ಅಧೀನರಾಗಿಬಿಡುವುದು ವಿಪರ್ಯಾಸವಾಗುತ್ತದೆ. ಈ ಇಂದ್ರಿಯಗಳಿಗೆ ದಾಸಾನುದಾಸರಾದ ಮಾನವರು ಮುಂದೆ ಬರಲಿರುವ ದುರಂತದ ಅರಿವಿಲ್ಲದೆ, ನಿರಂತರ ಭ್ರಮೆಯಲ್ಲಿಯೇ ಮುಳುಗುತ್ತಾರೆ. ಆ ಭ್ರಮೆಯೆ ಮಾಯೆ. 'ಮನುಜರ ಕೊಂದು ಕೂಗದೆ ಮಾಯೆ' ಎಂಬ ವಿಷಾದಪೂರ್ಣ ಉದ್ಗಾರ ಮಾಡುತ್ತಾರೆ ಸೊಡ್ಡಳ ಬಾಚರಸರು.

ಶರಣರು ಐಕ್ಯಸ್ಥಲದಲ್ಲಿ ಲಿಂಗಾಂಗ ಸಾಮರಸ್ಯದ ರಹಸ್ಯವನ್ನು ಪರಸ್ಪರರಲ್ಲಿ ಹಂಚಿಕೊಳ್ಳುವ ಪ್ರಸಂಗವಿದೆ. ಅಂಗ ಮತ್ತು ಲಿಂಗ ಸಂಬಂಧದ ಸೂಕ್ಷ್ಮತೆಯನ್ನು ಸೊಡ್ಡಳ ಬಾಚರಸರ ವಚನಗಳಲ್ಲಿ ಕಂಡುಬರುತ್ತದೆ.

ಅಂಗ ಲಿಂಗಕ್ಕೆ ಗೂಡಾಯಿತ್ತು. ಲಿಂಗ ಅಂಗಕ್ಕೆ ಗೂಡಾಯಿತ್ತು.
ಅಂಗಲಿಂಗಸಂಗವೆಂಬ ಸಂದಳಿದು ನಿಜಲಿಂಗೈಕ್ಯವಾಯಿತ್ತು.
ಭಾವ ನಿರ್ಭಾವ ನಿಷ್ಪತ್ತಿಯಲ್ಲಿ,
ಮಹಾದಾನಿ ಸೊಡ್ಡಳಂಗೆ ಸರ್ವನಿರ್ವಾಣವಾಯಿತ್ತು.

ಅಂಗವು ಲಿಂಗದ ಸ್ಥಿತಿಯನ್ನು ಪೂರ್ಣವಾಗಿ ಅಂತರ್ಗತಗೊಳಿಸಿ ಕೊಂಡಾಗ, 'ನಾನು' ಎಂಬ ಅಹಂಕಾರದ ನಡುವೆ ಸುಳಿಯುತ್ತಿದ್ದ ಭ್ರಮಾತ್ಮಕ ವ್ಯಾವಹಾರಿಕತೆಯಿಂದ ಹೊರಬಂದು, ವಿಶ್ವಾತ್ಮಕ ನೆಲೆಗೆ ಜೀವಾತ್ಮ ಕೂಡಿಕೊಳ್ಳುತ್ತದೆ. 'ನೀ' ಎನ್ನುವ ದೈವದ ವಿಶ್ವಾತ್ಮಕ ನೆಲೆಯೊಳಗೆ ಜೀವವು ಬೆರೆತು ಕರಗುವ ಮೂಲಕ ಸೀಮಾತೀತ ಕಲೆ ನೆಲೆ ಸಾಧಕನಿಗೆ ದೊರೆಯುತ್ತದೆ. ನಾ–ನೀ ಎಂಬ ದ್ವಂದ್ವ ಅಳಿದು, ಸಾಗರದೊಳಗೆ ಸೇರಿ

ಸಾಗರವೇ ಆದ ಅನುಭವದ ಹೊಳಹಾಗಿ ನಿರ್ಭಾವದ ನಿಷ್ಪತ್ತಿಯಾಗುತ್ತದೆ.

ಬಾಹ್ಯ ಪೂಜೆಯೂ ಅಂಗ-ಲಿಂಗದ ನಡುವಿನ ಭೇದವಿರುವವರೆಗೆ ನಡೆಯುತ್ತದೆ. ಅಂಗ ಎಂದರೆ ಜೀವಿಯ ಕಾಯ ಹಾಗೂ ಪ್ರಾಣರೂಪವಾಗಿರುವ ಲಿಂಗದ ಸಂಬಂಧದ ಸ್ವರೂಪವನ್ನು ವಿವರಿಸುತ್ತವೆ. ಅಂಗ-ಲಿಂಗದ ನಡುವೆ ಭಿನ್ನತೆ ದೂರಾಗಿ ಕಾಯವಿಕಾರವನ್ನು ಅಳಿಯದಿದ್ದರೆ ಸೊಡ್ಡಳದೇವ ಮೆಚ್ಚಲಾರನೆಂಬ ನಿಲವನ್ನು ಬಾಚರಸರು ವ್ಯಕ್ತಪಡಿಸುತ್ತಾರೆ.

ಅಂಗಲಿಂಗಸಂಬಂಧವೆಂಬ ದ್ವಂದ್ವವನಳಿದು,
ಅಷ್ಟವಿಧಾರ್ಚನೆ ಷೋಡಶೋಪಚಾರದ ಹಂಗ ಹರಿದು,
ಸೋಹಂ ಸೋಹಂ ಎನ್ನುತ್ತಿದ್ದಿತ್ತು.
ಸೋಹಂ ಸೋಹಂ ಎಂಬ ಸುಖದ ಸವಿಯ,
ಮಹಾದಾನಿ ಸೊಡ್ಡಳಲಿಂಗವಾರೋಗಣೆಯ ಮಾಡಿ,
ನಿಜನಿವಾಸಿಯಾದ ಕಾರಣ, ನಾನು ನಾಮಸೀಮೆಗೆಟ್ಟೆನಯ್ಯ.

ಜೀವವು ತನ್ನ ಅಂಗದೊಳಗೆ ಅಡಗಿರುವ ಅಪೂರ್ಣತ್ವ ಕಳೆದುಕೊಂಡು ಪೂರ್ಣತ್ವದ ಸಾಕಾರಮೂರ್ತಿಯಾದ ಶಿವರೂಪಿ ಲಿಂಗವೇ ಆಗುತ್ತದೆ. ಅಂಗ ಮತ್ತು ಲಿಂಗದ ಮಧ್ಯದಲ್ಲಿನ ದ್ವಂದ್ವವನ್ನು ಅಳಿಸಿಕೊಂಡಾಗ, ಅಷ್ಟವಿದಾರ್ಚನೆ, ಷೋಡಶೋಪಚಾರಗಳು ಪೂಜಿಸುವ ಕ್ರಿಯೆಗೆ ನಿಚ್ಚಣಿಕೆಯಾಗಿ ಸಹಾಯಕವಾಗುತ್ತವೆ. ನಾ-ನೀ ಎಂಬ ಭೇದ ಅಳಿದು ಒಮ್ಮನದ ಭಾವ ಮನದಲ್ಲಿ ಮಿಡಿಯುವಾಗ ಭಕ್ತನು ಅನುಭವಿಸುವ ಸುಖದ ಸವಿಯೇ ಸೊಡ್ಡಳಲಿಂಗಕ್ಕೆ ಆರೋಗಣೆಯಾಗುತ್ತದೆ. ಆಗ ಆ ಸುಖದ ಸವಿಯನ್ನು ನೀಡುವವ ಮತ್ತು ಸ್ವೀಕರಿಸುವವ ಒಂದೇ ಆದ ಕಾರಣ ನಾಮಸೀಮೆಗೆಟ್ಟೆನಯ್ಯ ಎಂದು ಬಾಚರಸರು ನಿವೇದಿಸಿಕೊಳ್ಳುತ್ತಾರೆ.

ಏಕದೇವ ನಿಷ್ಠರಾದ ಸೊಡ್ಡಳ ಬಾಚರಸರು ತನ್ನನ್ನು ತಾನು 'ತಿಪ್ಪೆಯ ಹುಳು'ವಿನ ಮಟ್ಟಕ್ಕೂ ಕುಗ್ಗಿಸಿಕೊಳ್ಳಬಲ್ಲ ಶರಣಾಗತ ಸ್ಥಿತಿ ಹೊಂದಿದ ಮಹಾನ್ ಶರಣರಾಗಿದ್ದರು.

ಬ್ರಹ್ಮಪದವಿಯನೊಲ್ಲೆ, ವಿಷ್ಣುಪದವಿಯನೊಲ್ಲೆ,
ರುದ್ರಪದವಿಯನೊಲ್ಲೆ, ಇಂದ್ರಪದವಿಯನೊಲ್ಲೆ,
ಉಳಿದ ದೇವತೆಗಳ ಪದವಿಯನೊಲ್ಲೆ,
ಎಲ್ಲಕ್ಕೂ ಒಡೆಯನಾದ ಶಿವನ ಪ್ರಮಥಗಣಂಗಳ
ತಿಪ್ಪೆಯ ಮೇಲಣ ಹುಳುವಾಗಿ ಹುಟ್ಟುವ ಪದವಿಯ ಕರುಣಿಸು,
ಮಹಾಮಹಿಮ ಸೊಡ್ಡಳಾ.

ಶರಣರು ಎಲ್ಲ ಪ್ರಶಸ್ತಿ, ಪದವಿಗಳನ್ನು ಮೀರಿ ಬೆಳೆದವರು. ಅವರಿಗೆ ಮರ್ತ್ಯಲೋಕದಲ್ಲಿರುವವು ಅಷ್ಟೇ ಅಲ್ಲ, ದೇವಲೋಕದಲ್ಲಿರುವವರು ಎನ್ನುವ ಪದವಿಗಳಾದ ಬ್ರಹ್ಮ, ವಿಷ್ಣು, ರುದ್ರ, ಇಂದ್ರ, ಹೀಗೆ ಉಳಿದ ಯಾವ ದೇವತೆಗಳ ಪದವಿಗಳು ಶಿವನು ಕೊಡುವೆನೆಂದರೂ ನಾನೊಲ್ಲೇ ಎಂದವರು. ಏಕೆಂದರೆ ಆ ಪರಾತ್ಪರ ಪರಮಾತ್ಮನ ನಿಜ ಜ್ಞಾನವುಳ್ಳ ಶಿವ ಪ್ರಮಥಗಣಂಗಳ, ಅಂದರೆ ಬಸವಾದಿ ಶರಣರ ಪಾದಗಳನ್ನರಿದಿಪ್ಪ, ಅನುಭಾವಿಗಳ ಮಹಾಮನೆಯ ಮುಂದಿನ ತಿಪ್ಪೆಯ ಮೇಲೆ ಹುಳುವಾಗಿಯಾದರೂ ಹುಟ್ಟುವ ಪದವಿಯನ್ನು ಕರುಣಿಸು ತಂದೆ ಎಂಬ ಸೊಡ್ಡಳ ಬಾಚರಸರ ನುಡಿಗಳಲ್ಲಿನ ಸಹಜವಾದ ವಿನಯಶೀಲತೆಯು ಎಲ್ಲಕ್ಕಿಂತ ಹೆಚ್ಚಿನದಾಗಿ ಭಕ್ತಿಗೆ ಉಕ್ಕು ಬಂದಾಗ ಭಾವ ನಿರ್ಭಾವವಾಗುತ್ತದೆ.

ಮಾತಿನ ಮಾಲೆಯಲ್ಲಿ ಶಿವಾಚಾರ ಸಿಲುಕದಂತೆ, ಭಾವನಿರ್ಭಾವ ನಿಷ್ಪತ್ತಿಯಾದಲ್ಲಿ ಸರ್ವ ನಿರ್ವಾಣವಾದಂತೆ, ಈ ಸತ್ಕ್ರಿಯೆಗೆ ಈ ಫಲ, ಈ ಪುಣ್ಯಕ್ಕೆ ಈ ಫಲ ಎಂಬ ಕೈಕೂಲಿಕಾರರೆಲ್ಲ ಕರ್ಮಿಗಳಂತೆ, ಒಡಲೊಡವೆ ಪಡೆದರ್ಥ ಮೃಡದೇವ ಎಂಬಾತ ಸೊಡ್ಡಳನಿಗೆ ಬೆಡಗಿನ ಪುತ್ರನಂತೆ, ಉಳಿದವರೆಲ್ಲ ಜಗದ ಮಿತ್ರರಂತೆ, ಒಡೆದ ಮುತ್ತು ನಾಣ್ಯಕ್ಕೆ ಸಲ್ಲದು, ಒಡೆದ ಹಾಲು ಪಂಚಾಮೃತಕ್ಕೆ ಸಲ್ಲದಂತೆ, ಹೀಗೆ ಸೊಡ್ಡಳ ಬಾಚರಸರು ತಮ್ಮ ಅನೇಕ ಸತ್ವವುಳ್ಳ ಸುಭಾಷಿತ ನುಡಿಗಳನ್ನು ಹೇಳಿದ್ದಾರೆ.

ನಿಜಲಿಂಗದ ಒಡಲೊಳಗೆ ಶರಣ ಸೊಡ್ಡಳರು

ಕಲ್ಯಾಣದ ಅನುಭವ ಮಂಟಪ, ಮಹಾಮನೆಯ ಮಹಾಬೆಳಕಿನಲ್ಲಿ

ಮಿನುಗುತ್ತಿರುವ ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭುದೇವ, ಸಿದ್ಧರಾಮರಾದಿಯಾಗಿ ಅನೇಕ ಮಹಾನ್ ಶರಣರ ಸಹವಾಸದ ಸತ್ಪರಿಣಾಮ ಬಾಚರಸರ ಮೇಲೆ ಸಂಪೂರ್ಣವಾಗಿ ಬೀರಿದ್ದು ಎದ್ದು ಕಾಣುತ್ತಿದೆ.

ಶರಣತತ್ತ್ವದ ಮೂಲಧ್ಯೇಯೋದ್ದೇಶವಾದ ಲಿಂಗಾಂಗ ಸಾಮರಸ್ಯದ ಸಾಧನೆಯಲ್ಲಿ ಸಾಗುತ್ತ ಸೊಡ್ಡಳ ಬಾಚರಸರು ಶರಣರಿಗೆ ಅತ್ಯಂತ ಆಪ್ತರಾಗಿ ಬಾಳುತ್ತ ಲಿಂಗಾಂಗ ಸಾಮರಸ್ಯ ಸುಖದೊಳೊಗೆ ಓಲಾಡುವ ಪರಿಯನ್ನು ತಮ್ಮ ವಚನದಲ್ಲಿ ನಿರೂಪಿಸುತ್ತಾರೆ.

ಎನ್ನ ಕಾಯವೆಂಬ ಸಿಂಹಾಸನದಲ್ಲಿ,
ಪ್ರಾಣವೆಂಬ ಲಿಂಗವ ಮೂರ್ತಿಗೊಳಿಸಿ,
ಧ್ಯಾನವೆಂಬ ಹಸ್ತದಲ್ಲಿ ಮುಟ್ಟಿ ಪೂಜಿಸುತ್ತಿರಲು,
ಮೆಲ್ಲಮೆಲ್ಲನೆ ಸುತ್ತಿ ಮುತ್ತಿದ ಸಂಸಾರ ಬಯಲ ಬೆರಸಿ,
ನಾ ನೀನೆಂಬ ಭೇದವಳಿದು,
ಮಹಾದಾನಿ ಸೊಡ್ಡಳನಲ್ಲಿ ಲಿಂಗೈಕ್ಯವಾಯಿತ್ತು.

ಸೊಡ್ಡಳ ಬಾಚರಸರು ಲಿಂಗೈಕ್ಯದ ರೀತಿ ನುಡಿದಿದ್ದಾರೆ. ಐಕ್ಯಸ್ಥಲದಲ್ಲಿ ಶರಣನು ತಾನೇ ತಾನಾಗಿ ಉಳಿಯುತ್ತಾನೆ. ಲೋಕದ ಜಂಜಡವು ಅವನಿಗಿಲ್ಲ. ಆಗ ಅವನಿಗೆ ಲಿಂಗ ಸಾಧ್ಯವಾಯಿತ್ತೆಂದು ತಿಳಿಯಬೇಕು. ಅವನ ನಡೆ-ನುಡಿ ಸುಖ-ದುಃಖ ಎಲ್ಲ ಎಲ್ಲವೂ ಲಿಂಗಮಯವಾಗುತ್ತದೆ. ಅವನು ಯಾರಿಗೂ ನಿಲುಕದ ಅನುಪಮ ಚರಿತನು ಉಪಮಾತೀತನು ಆಗಿರುತ್ತಾನೆ.

ತನ್ನ ಕಾಲದ ಶರಣ ಸಂಕುಲವೆಂಬ ಬೆಳಗಿನ ಬಳಗದಲ್ಲಿ ತಾನು ಬದುಕಿದ್ದುದು ತನ್ನ ಭಾಗ್ಯವೆಂದು ಬಾಚರಸರು ನಿಜತತ್ತ್ವದ ನಿರ್ವಯಲು ನಿರ್ವಾಹವಾಯಿತ್ತು. ಬಸವಣ್ಣ-ಚನ್ನಬಸವಣ್ಣನ ಮಾಮನೆಯಲ್ಲಿ, ಸೊಡ್ಡಳನ ಶರಣ ಪ್ರಭುದೇವರು ನಿರವಯ ಬೆರಸಲೊಡನೆ, ಸತ್ಯಲೋಕದ ಬಾಗಿಲ ಕದ ತೆರೆಯಿತ್ತು. ! ತನ್ನ ಕಣ್ಣೆದುರಿಗೇ ಸತ್ಯಲೋಕದ ಬಾಗಿಲ ಕದ ತೆರೆದುದನ್ನು ಕಂಡು ಧನ್ಯನಾದೆನು ಎಂಬ ಭಾವದಲ್ಲಿಯೇ ಸೊಡ್ಡಳ ಬಾಚರಸರು ಲಿಂಗದೊಳಗೆ ಲೀನವಾದರು.

ಬಸವಣ್ಣನವರಿಗೂ ಸೊಡ್ಡಳ ಬಾಚರಸರಿಗೂ ಇದ್ದ ಸಂಬಂಧ ಮಾತಿಗೂ ನಿಲುಕದ್ದು 'ಕೂಡಲಸಂಗನ ಶರಣ ಸೊಡ್ಡಳ ಬಾಚರಸರ ಕರುಣೆವುಳ್ಳನ್ನಕ್ಕರ ಇನ್ನೂ ನಾನು ಅಂಜುವನಲ್ಲ ಕಾಣಾ ಚನ್ನಬಸವಣ್ಣಾ' ಎಂದು ಬಸವಣ್ಣನವರು ಸೊಡ್ಡಳ ಬಾಚರಸರಿಗೆ ನುಡಿನಮನ ಸಲ್ಲಿಸುತ್ತಾರೆ.

ಎಮ್ಮವರಿಗೆ ಸಾವಿಲ್ಲ. ಎಮ್ಮವರು ಸಾವನಱಿಯರು.
ಸಾವೆಂಬುದು ಸಯವಲ್ಲ.
ಲಿಂಗದಲ್ಲಿ ಉದಯವಾದ ನಿಜೈಕ್ಯರಿಗೆ
ಆ ಲಿಂಗದಲ್ಲಿಯಲ್ಲದೆ ಬೇಱೆ ಮತ್ತೊಂದೆಡೆಯಿಲ್ಲ.
ಕೂಡಲಸಂಗಮದೇವರ ಶರಣ ಸೊಡ್ಡಳ ಬಾಚರಸರು
ನಿಜಲಿಂಗದ ಒಡಲೊಳಗೆ ಬಗಿದು ಹೊಕ್ಕಡೆ,
ಉಪಮಿಸಬಲ್ಲವರ ಕಾಣೆನು.

– ಬಸವಣ್ಣನವರು.

ಬಸವಣ್ಣನವರು ಮಹಾಮನೆಯಲ್ಲಿ ಮಹಾದಾನಿ ಸೊಡ್ಡಳರು ಲಿಂಗದಲ್ಲಿ ಉದಯವಾದ ಮಾನವ ಅಂದರೆ ಲಿಂಗದಲ್ಲಿ ಹುಟ್ಟಿ ಲಿಂಗದಲ್ಲಿ ಹೊಕ್ಕು ನಿಜಲಿಂಗದಲ್ಲಿ ನಿಜೈಕ್ಯವಾಗಿ ಇರುವ ಸೊಡ್ಡಳ ಬಾಚರಸರು ಮೊದಲಾದ ಪ್ರಮಥರೆಲ್ಲರೂ ನಿಜವನ್ನೈದುವುದು ನಿರ್ವಯಲ ಸಮಾಧಿಯಲ್ಲಿ ಎಂದು ಸೊಡ್ಡಳ ಬಾಚರಸರ ಲಿಂಗೈಕ್ಯದ ಪರಿಯನ್ನು ಉದ್ಗಾರದಿಂದ ನುಡಿದು, ಮನದ ಸೀಮೆಯನ್ನು ದಾಟಿ, ನಿರಾಳ ಭಾವನೆಯ ಭಾವದಲ್ಲಿ ನಿಂತಿದೆ.

ಶರಣರ ದೃಷ್ಟಿಯಲ್ಲಿ ಬಾಚರಸರು

ಸೊಡ್ಡಳ ಬಾಚರಸರನ್ನು ಕಂಡ ಮಹೋನ್ನತ ವ್ಯಕ್ತಿತ್ವದ ಮಹತ್ತನ್ನು ಮತ್ತು ಅವರ ಸ್ಥಾನಮಾನಗಳನ್ನು ಶರಣರ ವಚನಗಳಿಂದ ತಿಳಿದುಕೊಳ್ಳಬಹುದು. ಅಂದು ಕಲ್ಯಾಣದಲ್ಲಿ ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭುದೇವರು, ಸಿದ್ಧರಾಮೇಶ್ವರರು, ಮರುಳಶಂಕರದೇವರು, ಆದಯ್ಯ,

ಡೋಹರ ಕಕ್ಕಯ್ಯ, ಹಾವಿನಾಳ ಕಲ್ಲಯ್ಯ, ಪುರದ ನಾಗಣ್ಣ, ಅಮುಗಿ ದೇವಯ್ಯ, ಗುಮ್ಮಳಾಪುರದ ಸಿದ್ಧಲಿಂಗ, ವಿಶ್ವಪತಿ ವಿಶ್ವನಾಥ, ಶ್ರೀಮುಕ್ತಿರಾಮೇಶ್ವರ ಮೊದಲಾದ ಶರಣರು ತಮ್ಮ ವಚನಗಳಲ್ಲಿ ಸೊಡ್ಡಳ ಬಾಚರಸರ ಕುರಿತು ಹೇಳಿರುವದು ಕಂಡುಬರುತ್ತದೆ.

> **ಮಾಱಂಕನಿಱೆವಲ್ಲಿ ಘಾಯಖಂಡಿಯ ತೋಱೆದಾತನೆ ತೆತ್ತಿಗ,**
> **ಕೈಯ ಕೈದು ಬಿದ್ದಲ್ಲಿ ಎತ್ತಿಕೊಟ್ಟಾತನೆ ಹಿತವ,**
> **ಕೂಡಲಸಂಗನ ಶರಣ ಸೊಡ್ಡಳ ಬಾಚರಸರ ಕರುಣವುಳ್ಳನ್ನಕ್ಕರ**
> **ಇನ್ನು ನಾನು ಅಂಜುವನಲ್ಲ ಕಾಣಾ, ಚನ್ನಬಸವಣ್ಣಾ.**

– ಬಸವಣ್ಣನವರು

ಬಸವಣ್ಣನವರು ಎಂಥದ್ದೇ ಸಮಸ್ಯೆಗಳು ಬಂದರೂ ನಾವು ಅಂಜಬೇಕಾಗಿಲ್ಲ. 'ಕೂಡಲಸಂಗನ ಶರಣನಾಗಿರುವ ಸೊಡ್ಡಳ ಬಾಚರಸರ ಕರುಣವಿದೆ ಚನ್ನಬಸವಣ್ಣಾ' ಎಂದು ಅಭಿಮಾನದಿಂದ ಹೇಳುತ್ತಾರೆ. ಡೋಹರ ಕಕ್ಕಯ್ಯನವರು ಎನಗೆ ಗುರುಸ್ಥಲವ ತೋರಿದಾತ ಸಂಗನ ಬಸವಣ್ಣನು....ಎನಗೆ ಶರಣಸ್ಥಲವ ತೋರಿದಾತ ಸೊಡ್ಡಳ ಬಾಚರಸನು. ಇಂತೀ ಸ್ಥಲಗಳ ಕಂಡು ಏಳ್ನೂರೆಪ್ಪತ್ತು ಅಮರಗಣಂಗಳ ಕಂಡು ಬದುಕಿದೆನು ಕಾಣಾ! ಅಭಿನವ ಮಲ್ಲಿಕಾರ್ಜುನಾ ಎಂದು ತಮ್ಮ ವಚನದಲ್ಲಿ ವ್ಯಕ್ತಪಡಿಸಿದ್ದಾರೆ.

ಮರುಳಶಂಕರದೇವರು ತಮ್ಮ ವಚನದಲ್ಲಿ ಎನ್ನ ಜ್ಞಾನಾತ್ಮನ ಚೇತನನಯ್ಯ ಪ್ರಭುದೇವರು. ಎನ್ನ ಪರಮಾತ್ಮನ ಚೇತನನಯ್ಯ ಸಿದ್ಧರಾಮೇಶ್ವರ ದೇವರು. ಎನ್ನ ಚಿನ್ಮಯಾತ್ಮನ ಚೇತನನಯ್ಯ ಬಸವಣ್ಣನು. ಎನ್ನ ಅಂತರಾತ್ಮನ ಚೇತನನಯ್ಯ ಸೊಡ್ಡಳ ಬಾಚರಸರು.. ಎಂದು ಹೇಳುತ್ತಾ ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ, ನಿಮ್ಮ ಶರಣರ ಕರುಣವ ಪಡೆದನಾಗಿ, ಎನ್ನ ಕರ್ಮ ನಿರ್ಮೂಲವಾಯಿತ್ತಯ್ಯ, ನಿಮ್ಮ ಧರ್ಮ ನಿಮ್ಮ ಧರ್ಮ. ಎನ್ನುತ್ತಾರೆ. ಹಾವಿನಹಾಳ ಕಲ್ಲಯ್ಯನವರು ಎನ್ನ ಕಕ್ಷೆಯಲ್ಲಿ ಸ್ವಾಯತವಾದನಯ್ಯಾ ಶಂಕರದಾಶಿಮಯ್ಯನು..... ಎನ್ನ ಬ್ರಹ್ಮರಂಧ್ರದಲ್ಲಿ ಸ್ವಾಯತವಾದನಯ್ಯಾ ಸಂಗನಬಸವಣ್ಣನು.... ಎನ್ನ

ಲಲಾಟದಲ್ಲಿ ಸ್ವಾಯತವಾದನಯ್ಯಾ ಸೊಡ್ಡಳ ಬಾಚರಸರು...... ಎನ್ನ ಸರ್ವಾಂಗದಲ್ಲಿ ಸ್ವಾಯತವಾದರಯ್ಯಾ ಗಣಂಗಳು. ಮಹಾಲಿಂಗ ಕಲ್ಲೇಶ್ವರಾ, ನಿಮ್ಮ ಶರಣರ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು' ಎಂದು ನುಡಿದಿದ್ದಾರೆ.

ಪುರದ ನಾಗಣ್ಣ, ಅವರ ವಚನದಲ್ಲಿ ಎನ್ನ ಘ್ರಾಣದಲ್ಲಿ ಆಚಾರಲಿಂಗವಾಗಿ ಬಂದು, ಗಂಧಪದಾರ್ಥವ ಕೈಕೊಂಡನಯ್ಯಾ ಬಸವಣ್ಣ..... ಭಾವದಲ್ಲಿ ಬಾಚಿರಾಜಯ್ಯ, ಮನ ದೃಢವೆ ಮೋಳಿಗೆ ಮಾರಯ್ಯ. ಡೋಹರ ಕಕ್ಕಯ್ಯ ಕಿನ್ನರಿ ಬ್ರಹ್ಮಯ್ಯ ಸೊಡ್ಡಳ ಬಾಚರಸ......ಅಸಂಖ್ಯಾತ ಮಹಾಪ್ರಮಥಗಣಂಗಳ ಶ್ರೀಪಾದವನರ್ಚಿಸಿ ಪೂಜಿಸಿ ಸುಖಿಯಾದೆನಯ್ಯಾ ಅಮರಗುಂಡದ ಮಲ್ಲಿಕಾರ್ಜುನ. ಎಂದು ಹೇಳುತ್ತಾರೆ. ಶ್ರೀಮುಕ್ತಿರಾಮೇಶ್ವರರ ವಚನವೊಂದರಲ್ಲಿ ಎನ್ನ ಅರುಹಿನ ನೈಷ್ಠೆಯೆ ಸೊಡ್ಡಳ ಬಾಚರಸನು, ಎನ್ನುತ್ತಾರೆ. ಗುಮ್ಮಳಾಪರದ ಸಿದ್ಧಲಿಂಗ ಶರಣರು, ಎನ್ನ ನೇತ್ರದ ದೃಕ್ಕೆ ಸೊಡ್ಡಳ ಬಾಚರಸರು. ಎನ್ನುತ್ತಾರೆ. ಇನ್ನುಜನಪದರ ನುಡಿಗಳಲ್ಲಿ ಹೂಗಾರ ಮಾದಯ್ಯನವರ ತ್ರಿಪದಿಗಳಲ್ಲಿ ನಮಗೆ ಸೊಡ್ಡಳ ಬಾಚರಸರ ಬಗೆಗೆ ಕಂಡು ಬರುತ್ತದೆ.

ಅರಸ ಬಿಜ್ಜಳರಾಯ ನೆರೆಸಿರುವ ಓಲಗವು
ಶರಣ ಮಾದಯ್ಯ ಮಿಗಿಲೆಂದು । ಹೊಗಳುತಲಿ
ಅರಿತು ಸೊಡ್ಡಳದ ಬಾಚರಸ. ॥
ಕಾಡಿದರು ಹಾರುವರು ಆಡಿಕೊಂಡರ ನೋಡು
ಹಿಡಿಪತ್ರಿ ಕೊಡುವವಗೆ । ಕೊಡಹೊನ್ನು
ನೀಡೆ ಬೊಕ್ಕಸದ ಬಾಚರಸ.॥

ಚನ್ನಬಸವಣ್ಣನವರು ಸೊಡ್ಡಳ ಬಾಚರಸರ ಸೊಡ್ಡಳದೇವನ ದೃಷ್ಟಿ ಮಾತ್ರದಿಂದಲೆ ಅಸಾಧ್ಯವಾದುದು ಸಾಧ್ಯವಾಗುವುದೆಂದು ವ್ಯಕ್ತ ಪಡಿಸುತ್ತಾರೆ.

ಘಟನಾಘಟನಸಮರ್ಥನಪ್ಪ ಶ್ರೀಗುರುವಿನ ಪ್ರಸಾದದಿಂದಲ್ಲದೆ,
ಮಾಯೆಗೆ ಮರುಳಾದ ನರಜೀವಿಗಳ
ಬಹಿರಂಗ ಬರಿಯಸಂಸ್ಕಾರ ಮಾತ್ರದಿಂದ ಭವಿ ಭಕ್ತನಪ್ಪನೆ ?
ಸೊಡ್ಡಳದೇವನ ಶುಭವಪ್ಪ ನೋಟದಿಂದ
ಇಟ್ಟಿಯ ಹಣ್ಣುಗಳು ಸಿಹಿಯಾದುವಲ್ಲದೆ,
ಲೋಕದ ಕಾಕುಮಾನವರ ನೋಟಮಾತ್ರದಿಂದ ಸಿಹಿಯಾದುವೆ ?
ಅದು ಕಾರಣ ಅಂತಪ್ಪ ಸಾಮರ್ಥ್ಯವಿಲ್ಲದೆ
ಕಡುಪಾತಕಿಗಳ ಹಿಡಿದು ತಂದು, ಲಿಂಗವ ಕೊಡಲು
ಕಡೆತನಕ ಭವಿಗಳಾಗಿರ್ಪರಲ್ಲದೆ ಭಕ್ತರಾಗಲರಿಯರಯ್ಯಾ
ಕೂಡಲಚೆನ್ನಸಂಗಯ್ಯಾ. –ಚನ್ನಬಸವಣ್ಣನವರು

ಆದಯ್ಯನವರು ಸೊಡ್ಡಳ ಬಾಚರಸರ ಬಗ್ಗೆ ತಮ್ಮ ವಚನಗಳಲ್ಲಿ ಉಲ್ಲೇಖಿಸಿರುವುದು ನೋಡಬಹುದು. ಬಸವಣ್ಣನ ಭಕ್ತಿಸ್ಥಲ, ಮಡಿವಾಳ ಮಾಚಣ್ಣನ ಮಹೇಶ್ವರ ಸ್ಥಲ, ಘಟ್ಟಿವಾಳ ಮುದ್ದಣ್ಣನ ಪ್ರಸಾದಿಸ್ಥಲ, ಚನ್ನಬಸವಣ್ಣನ ಪ್ರಾಣಲಿಂಗಿಸ್ಥಲ, ಪ್ರಭುವಿನ ಶರಣಸ್ಥಲ, ಸೊಡ್ಡಳ ಬಾಚರಸರ ಐಕ್ಯಸ್ಥಲ, ನಿಮ್ಮೊಳೆನಗೆಂದಪ್ಪುದೊ ಸೌರಾಷ್ಟ್ರ ಸೋಮೇಶ್ವರಾ. ಹೀಗೆ ಆದಯ್ಯನವರ ಇನ್ನೊಂದು ವಚನದಲ್ಲಿ ಬಸವಣ್ಣನೆನ್ನ ಅಂಗ, ಮಡಿವಾಳನೆನ್ನ ಮನ, ಪ್ರಭುವೆನ್ನ ಪ್ರಾಣ, ಚನ್ನಬಸವನೆನ್ನ ಕರಸ್ಥಲದ ಲಿಂಗ, ಘಟ್ಟಿವಾಳನೆನ್ನ ಭಾವ, ಸೊಡ್ಡಳ ಬಾಚರಸರೆನ್ನ ಅರಿವು, ಮಹಾದೇವಿ ಅಕ್ಕನೆನ್ನ ಜ್ಞಾನ ಅಸಂಖ್ಯಾತರೆನ್ನ ಅವಯವಂಗಳು., ಪುರಾತರೆನ್ನ ಪುಣ್ಯದ ಪುಂಜ, ಏಳುನೂರೆಪ್ಪತ್ತು ಅಮರಗಣಂಗಳೆನ್ನ ಗತಿಮತಿ ಚೈತನ್ಯ, ಸೌರಾಷ್ಟ್ರ ಸೋಮೇಶ್ವರಾ, ಆ ನಿಮ್ಮ ಶರಣರ ಪಡಿದೊತ್ತಯ್ಯಾ ಎಂದು ತಿಳಿಸಿದ್ದಾರೆ.

ಅವಧಿ ಅಳಿಯಿತ್ತು ವ್ಯವಧಾನ ಉಳಿಯಿತ್ತು.
ನಿಜವೆ ನಿಜವನೊಡಗೂಡಿತ್ತು ಕೇಳಾ ಬಸವಣ್ಣ.
ಕಲಿಯುಗದಲ್ಲಿ ಮುಂದೆ ಇರಬಾರದು ನಿಜಶರಣಂಗೆ
ನಡೆ ನೀನು ಕಪ್ಪಡಿಯ ಸಂಗಯ್ಯನಲ್ಲಿ ಒಡಗೂಡು.
ಉಳುಮೆಯಲ್ಲಿ ನಿಜವನೆಯ್ದು ನಡೆ, ಚನ್ನಬಸವಣ್ಣಾ.

ಮಹವನೊಡಗೂಡು ಮಡಿವಾಳಯ್ಯ
ಸೊಡ್ಡಳ ಬಾಚರಸರು ಮೊದಲಾದ ಪ್ರಮಥರೆಲ್ಲರು
ನಿಜವನೆಯ್ದುವುದು ನಿರ್ವವಯಲ ಸಮಾಧಿಯಲ್ಲಿ.
ಬಗಿದು ಹೊಗಿ ಲಿಂಗದೊಳಗೆ ಹೊಗುವರೆಲ್ಲರೂ !
ನಡೆಯಿರಿ ಕಾಯವೆರಸಿ ಕೈಲಾಸಕ್ಕೆ, ಕಾಯಸಹಿತ ಎಯ್ದುವುದು.
ನಿಮಗೆಲ್ಲರಿಗೆಯೂ ಉಪದೇಶಮಂತ್ರ ತಪ್ಪದು.
ನಮಗೆ ಕದಳಿಯಲ್ಲಿ ಹೊಕ್ಕು ನಿಜದಲ್ಲಿ ಒಡಗೂಡುವ ಪರಿಣಾಮ.
ಇದು ನಮ್ಮ ಗುಹೇಶ್ವರ ಲಿಂಗದ ಅಣತಿ ನಿಮಗೆಲ್ಲರಿಗೆಯೂ.

– ಅಲ್ಲಮಪ್ರಭುದೇವರು

ಅಲ್ಲಮ ಪ್ರಭುದೇವರು ಐಕ್ಯದ ಪರಿಯನ್ನು ವಿಮರ್ಶಿಸುತ್ತಾ ಏನೇನನ್ನೋ ನಿನಾದಿಸುತ್ತ ನಡೆದಂತಿದೆ! ಪ್ರಭುಗಳ ಸ್ವಾನುಭಾವದ ದೃಷ್ಟಿ 'ಲಿಂಗೈಕ್ಯ'ದ ಮೇಲೆ ಮಿಂಚು ಹೊಡೆದಂತಿದೆ. ಪೃಥ್ವಿಯ ಸ್ಥಲದಿಂದ ನಿರಾಳಲಿಂಗಕ್ಕೆ ನಿಚ್ಚಣಿಕೆಯಾಗಿ ನಿಂತಿರುವ ಸಂಗನ ಬಸವಣ್ಣನವರ ಘನವನ್ನು ಜಪಿಸಿಕೊಂಡು, ತಮ್ಮ ನಿಜಸಮಾಧಿಯ ಹರಿಯುವಿಕೆಯ ಅರಿತು, ನಿಜಸ್ಥಲವ ನಿಲುಗಡೆಯನ್ನು ನಿರೂಪಿಸಿಕೊಳ್ಳಬೇಕು. ಪ್ರಭುದೇವರು ಕಲ್ಯಾಣವನ್ನು ಬಿಟ್ಟು ಶ್ರೀಶೈಲ ಪರ್ವತದ ಕದಳಿಯ ಬನದ ಕಡೆಗೆ ಹೋಗುವ ಮುನ್ನ ಬಸವಾದಿ ಶರಣರೆಲ್ಲನ್ನು ಕಂಡು, ಶರಣರ ಜೀವಾವಧಿ ಮುಗಿಯುವ ಕಲ್ಯಾಣದ ಕಡೆಗಾಲ ಬಂದಿದೆ. ಮುಂದೆ ನಡೆಯುವ ಹರಳಯ್ಯ, ಮಧುವಯ್ಯಗಳ ಕಣ್ಣು ಕೀಳಿಸುವುದು, ಬಿಜ್ಜಳನ ಕೊಲೆ, ಶರಣರೆಲ್ಲ ಕಲ್ಯಾಣ ಬಿಟ್ಟು ದಿಕ್ಕಾಪಾಲಾಗಿ ಹೋಗುವುದು ಈ ಎಲ್ಲಾ ಘಟನೆಗಳ ಮೂನ್ಸೂಚನೆ ಯನ್ನು ಅರಿತ ಅಲ್ಲಮಪ್ರಭುದೇವರು ಸೂಕ್ಷ್ಮವಾಗಿ ಶರಣರಿಗೆ ತಿಳಿಸುತ್ತಾರೆ.

ನಿಜಶರಣರು ಎಲ್ಲಿಯೇ ಇರಲಿ, ಅವರ ನಿಜಸ್ಥಲ ಅವರೊಡನೆಯೇ ಒಡಗೂಡಿ ನಿಂತಿದೆ. ತನ್ನ ತಾನಗಲಿ ಇರಬಲ್ಲ ವಸ್ತು ಎಲ್ಲಿದೆ ಜಗತ್ತಿನೊಳಗೆ? ಇದರ ಪರಮ ನಿಶ್ಚಯದಲ್ಲಿದ್ದ ಪ್ರಭುದೇವರು ನಿಜದ ನಿರ್ಣಯವನ್ನೇ ನಿರೂಪಿಸುತ್ತಾರೆ. ಯಾವ ಯುಗಜುಗಂಗಳ ಹೆದರಿಕೆಯುವರಲ್ಲ

ಅಲ್ಲಮಪ್ರಭುಗಳು. ಗುಹೇಶ್ವರ ಲಿಂಗದ ಅಣತಿಯಂತೆ ಬಸವಾದಿ ಶರಣರೆಲ್ಲರನ್ನು ಸಂಗಯ್ಯನಲ್ಲಿ ಒಡಗೂಡಲು, ಮಹವನೊಡಗೊಂಡು ನಿರ್ವಯಲ ಸಮಾಧಿಯಲ್ಲಿ ಬಗಿದು ನಿಜವನ್ನೈದುವುದು. ಲಿಂಗದೊಳಗೆ ಕಾಯವೆರಸಿ ಬಯಲೊಳಗೆ ಬಯಲಾಗಿರಿ ಎಂಬ ಸಂದೇಶ ನೀಡುವ ಅಲ್ಲಮಪ್ರಭುವಿನ ಈ ವಚನದಲ್ಲಿ ಸೊಡ್ಡಳ ಬಾಚರಸರ ಹೆಸರು ಕಂಡು ಬರುತ್ತದೆ.

ಜಗತ್ತಿನ ತುಳಿತಕ್ಕೊಳಗಾದವರು ಎಲ್ಲ ತೆರನಾದ ಶೋಷಣೆಗಳಿಂದ ಹೇಗೆ ವಿಮೋಚನೆಗೊಳ್ಳಬೇಕೆಂಬ ಬಗ್ಗೆ ವಚನ ಚಳವಳಿಯ ಮೂಲಕ ಮಾರ್ಗದರ್ಶನ ಮಾಡಿದ ಕೀರ್ತಿ ೧೨ನೆಯ ಶತಮಾನದ ಶರಣರಿಗೆ ಸಲ್ಲುತ್ತದೆ.

'ದಯವೇ ಧರ್ಮದ ಮೂಲ' ಎಂಬುದನ್ನು ನಂಬಿದ್ದ ಶರಣರು ಎಲ್ಲ ರೀತಿಯ ಕ್ರೌರ್ಯದ ವಿರುದ್ಧ ಧ್ವನಿ ಎತ್ತಿದರು. ಭಾರತೀಯ ಸಮಾಜ ಮನುಸ್ಮೃತಿಯ ಪ್ರಭಾವದಿಂದಾಗಿ ಬಹುಸಂಖ್ಯಾತ ಜನಸಮುದಾಯವನ್ನು ಶೋಷಣೆಗೆ ತಳ್ಳಿತ್ತು. ಮನುಸ್ಮೃತಿ ನಿಜವಾದ ಅರ್ಥದಲ್ಲಿ ಸವರ್ಣೀಯರ ಸಮಾಜೋ-ಧಾರ್ಮಿಕ ಮತ್ತು ಆರ್ಥಿಕ ವ್ಯವಸ್ಥೆಯಾಗಿದೆ. ಬಹುಸಂಖ್ಯಾತ ಶೂದ್ರರನ್ನು ಮತ್ತು ಪಂಚಮರನ್ನು ಯಾವ ರೀತಿ ಶೋಷಣೆ ಮಾಡಬೇಕು ಎಂಬುದನ್ನು ಸವರ್ಣೀಯರಿಗೆ ಶಾಸನಬದ್ಧವಾಗಿ ಹೇಳಿಕೊಡುವಂಥದ್ದಾಗಿದೆ. ಅದು ವಿವಿಧ ಕಾಯಕಗಳನ್ನು ಮಾಡುವ ಬಹುಸಂಖ್ಯಾತ ಕಾಯಕ ಜೀವಿಗಳನ್ನು ಜಾತಿ, ಉಪಜಾತಿ ಮತ್ತು ಅಸ್ಪೃಶ್ಯತೆಯ ಕಟ್ಟುಪಾಡುಗಳಲ್ಲಿ ಕಟ್ಟಿ ಹಾಕಿತು. ಸಮಾಜದ ಅರ್ಧ ಭಾಗವಾಗಿರುವ ಮಹಿಳೆಯ ಸ್ವಾತಂತ್ರ್ಯವನ್ನು ಕಸಿದುಕೊಂಡು ಮೇಲ್ಜಾತಿ ಪುರುಷ ಪ್ರಧಾನ ಸಮಾಜದ ವ್ಯವಸ್ಥೆಗೆ ಯಾವುದೇ ರೀತಿಯ ಸಮಸ್ಯೆಯಾಗದಂತೆ ನೋಡಿಕೊಂಡಿತು.

ನಡೆ ನುಡಿ ಸಿದ್ಧಾಂತದ ಬಸವಾದಿ ಶರಣರು ವಚನ ಚಳವಳಿಯ ಮೂಲಕ ಈ ಎಲ್ಲ ಅನಿಷ್ಟಗಳ ವಿರುದ್ಧ ಹೋರಾಡಿದರು. ಅಂಥ ಶರಣರಲ್ಲಿ ಸೊಡ್ಡಳ ಬಾಚರಸರೂ ಒಬ್ಬರಾಗಿದ್ದಾರೆ. ಅವರು ಮನುವಾದಿ ವೈದಿಕ ಕ್ರೌರ್ಯದ ವಿರುದ್ಧ ಧ್ವನಿ ಎತ್ತಿದ್ದಾರೆ. ಅವರ ವಚನಗಳು ಮಾನವ ಸಮಾನತೆಯ ಸಂದೇಶ ಸಾರುವಲ್ಲಿ ಯಶಸ್ವಿಯಾಗಿವೆ.

ಶರಣರು ಆ ಕಾಲದಲ್ಲೇ ಜಾತಿ ಇಲ್ಲದ ಶರಣಧರ್ಮ ಸ್ಥಾಪನೆ ಮಾಡಿದರು. ಶರಣ ಸಂಕುಲ ಎಂಬುದು ವೈದಿಕ ಸಮಾಜಕ್ಕೆ ಪರ್ಯಾಯವಾದ ಸಮಾನತೆಯ ಸಮಾಜವನ್ನಾಗಿ ಸ್ಥಾಪಿಸಿದರು. ಲಿಂಗವಂತರಾಗಿದ್ದ ಸಮಗಾರ ಹರಳಯ್ಯನವರ ಮಗನ ಜೊತೆ ಬ್ರಾಹ್ಮಣ ಮೂಲದಿಂದ ಬಂದು ಲಿಂಗವಂತರಾಗಿದ್ದ ಮಧುವರಸರ ಮಗಳ ಮದುವೆ ಮಾಡಿದರು.

ಕೆಳಜಾತಿಯ ಯುವಕ ಮೇಲ್ಜಾತಿಯ ಯುವತಿಯನ್ನು ಮದುವೆ ಯಾಗುವುದು ಧರ್ಮಬಾಹಿರ. ಆದ್ದರಿಂದ ಮನುಧರ್ಮಕ್ಕೆ ವಿರುದ್ಧವಾದ ಈ ಪ್ರತಿಲೋಮ ವಿವಾಹದ ಬಗ್ಗೆ ಕ್ರಮಕೈಗೊಂಡು ರಾಜಧರ್ಮ ಪಾಲಿಸಬೇಕೆಂದು ವೈದಿಕರು ರಾಜ ಬಿಜ್ಜಳನಿಗೆ ಒತ್ತಾಯಿಸಿದರು. ಜಾತಿ ನಂಬದ ಲಿಂಗವಂತರಲ್ಲಿ ಪ್ರತಿಲೋಮ ವಿವಾಹದ ಪ್ರಶ್ನೆ ಬರುವುದಿಲ್ಲ ಎಂದು ಕೇಳಿದರೂ ಪಟ್ಟಭದ್ರರು ಕಿವಿಗೊಡಲಿಲ್ಲ. ಇದನ್ನೆಲ್ಲ ಗಣನೆಗೆ ತೆಗೆದುಕೊಳ್ಳದೆ ಶರಣರ ಮೇಲೆ ದಾಳಿ ಮಾಡಲು ಬಿಜ್ಜಳನಿಗೆ ಒತ್ತಾಯಿಸಿದರು.

ಬಿಜ್ಜಳನ ಸೈನಿಕರು ಶರಣರ ಮೇಲೆ ದಾಳಿ ಮಾಡಿದಾಗ ಅನೇಕ ಸಾವು–ನೋವುಗಳ ಸಂಭವಿಸಿದವು. ಹರಳಯ್ಯ ಮಧುವರಸರಿಗೆ ಎಳಿಹೂಟಿ ಶಿಕ್ಷೆ ನೀಡಿ ಕೊಲ್ಲಲಾಯಿತು. ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶರಣರು ಕಲ್ಯಾಣ ತೊರೆದು ದಿಕ್ಕುತೋಚಿದ ಕಡೆಗೆ ಹೋದರು. ನಂತರ ಯಾರು ಎಲ್ಲಿಗೆ ಹೋದರೆಂಬುದು ಸಂಪೂರ್ಣವಾಗಿ ತಿಳಿಯಲಿಲ್ಲ.

ಆ ಕಲ್ಯಾಣದ ಹತ್ಯಾಕಾಂಡದ ಸಂದರ್ಭದಲ್ಲಿ ಸೊಡ್ಡಳ ಬಾಚರಸರು ಎಲ್ಲಿ ಲಿಂಗೈಕ್ಯರಾದರು ಎಂಬ ಬಗ್ಗೆಯೂ ಗೊತ್ತಾಗಲಿಲ್ಲ. ಆದರೆ ಅವರ ವಚನಗಳಲ್ಲಿ ಅವರು ಅಮರರಾಗಿದ್ದಾರೆ. ಕಷ್ಟ ಕುಲದವರ ಬಗ್ಗೆ ಅವರಿಗಿರುವ ಪ್ರೀತಿಯಿಂದಾಗಿ ಅವರು ಮನುವಾದಿಗಳ ಬಗ್ಗೆ ತಾಳಿದ ನಿಲವು ಸಾತ್ವಿಕ ತಾಪ ಮತ್ತು ವೈಚಾರಿಕತೆಯಿಂದ ಕೂಡಿದೆ.

■■

ಸೊಡ್ಡಳ ಬಾಚರಸರು ರಚಿಸಿದ ಸ್ವರವಚನಗಳು

೧. ಭಕ್ತಿ :

ಮುಂದನೆಣಿಸದೆ, ದಿನದಿನಕ್ಕೆ ಪರಮಾಯು ಸಲೆ
ಸಂದುದೆನಿಪಾ ದೃಢತೆ ನೆಲೆಗೊಂಡು, ಚರಲಿಂಗ-
ಕಂದಂದಿಗೇನುಮಂ ವಂಚಿಸದೆ ಮಾಡುತಿಹ ದಾಸೋಹಿ
ಸದ್ಭಕ್ತನು ॥ಪಲ್ಲವಿ॥

ಭಯ, ಭಕ್ತಿ, ಕರುಣ, ಕಿಂಕುರ್ವಾಣ, ದಾಸೋಹ,
ನಯ, ಭೃತ್ಯಭಾವ, ಸಜ್ಜನ, ಸತ್ಯಸಮತೆ, ಸದ್ವಿ-
ನಯಗುಣ, ನಿಷ್ಠೆ, ಸಾಹಿತ್ಯ, ಸರ್ವಧಾನ, ಕ್ಷಮೆ, ಷಡ್ವ್ರತಾಚಾರವು,
'ನಿಯತ' ನಿರ್ವಿಕಲ್ಪತೆ ನಿರತಿ-
ಶಯಜಾ [ತ್ಯ] ಭೇದ, ನಿರಂಕಾರ, ಸಾತ್ವಿಕ
ದಯದಳುಕಿನಿಂ ಲಿಂಗಜಂಗಮಕೆ ಸಯವಾಗಿ ಮಾಡುವಾತನೆ ಭಕ್ತನು.

ಅನವರತ ದಾಸೋಹದಲ್ಲಿ ಮನ ಬೆರಸಿ ನಿಜ-
ತನು ಕರಗುಹಂ, ಲಿಂಗಜಂಗಮವ ಕಾಣುತ್ತ
ವಿನಯದಿಂದಶ್ರುಜಲವಾನಂದದಿಂದವರ ಪದಸೋಂಕಿನಿಂ ಸುರಿಯಲು
ತನುಪುಳಕ ತಳಿತು 'ತನತನಗೆ' ಹೊರೆಯೇಜಿ ನಲಿ-
ದs ಣುಕೇಳುಹಂ, ಮಹೋತ್ಸಾಹಭಾವ ಗುಡಿಗಟ್ಟಿ
ಕುಣಿಕುಣಿದು ಕೂರ್ಮೆಯಿಂ ಮಾಡಿ ದಣಿವಿಲ್ಲದಿರುಹಂ-ಭಕ್ತನಂಗಚಿಹ್ನ.

ತನ್ನ ಮಾಟಕೆ ತಾನೆ ಮುಯ್ಯಾನ ದಾಸೋಹಿ,
ಸನ್ನಹಿತನೆಂಬ ಹೊಗಳತೆಯ ಹೊಱ, ಪರರ ಹಳಿ-
ವನ್ಯಾಯಕೆಳಸಃಹಂಕಾರವಳಿದೇನುವಂ ತಾನೆನ್ನ ತನಗೆನ್ನನು;
ಹೊನ್ನು-ಹೆಣ್ಣು-ಮಣ್ಣಿನೊಳು ಸಿಲುಕದಾ ತ್ರಯವ
ತನ್ನದೆನ್ನದೆ ಲಿಂಗಜಂಗಮಕೆ ಸವಿಸುತ್ತ,
ತನ್ಮೂರ್ತಿಯಾಗಿ ನಿಭ್ರಾಂತನಾಗಿರಬಲ್ಲಡಾತನೇ ಸದ್ಭಕ್ತನು.

ಮತ್ತೆ ಮತ್ತೆಯು, ಮಗುಳೆ, ಲಿಂಗಕ್ಕೆ ಜಂಗಮಕ್ಕೆ
ತೊತ್ತಾಗಿ, ಕೀಳುಕಿಂಕರನಾಗಿ, ಭಯದಿಂದ
ಭೃತ್ಯರಾಳಾಳಾಗಿಯುಟ್ಟ ಮೈಲಿಗೆಯುಳ್ಳ 'ತಂಬುಲಕೊಕ್ಕು' ಮಿಕ್ಕ
ಸತ್ಯಪ್ರಸಾದಕ್ಯೋಗ್ಯತೆವಡೆದೆನೆಂಬ ಭಾ-
ವೋತ್ತಮತೆಯಿಂದ ಚರಿಸುವ ಭಕ್ತನೇ ಭಕ್ತಿ-
ಗೆತ್ತಿದ ಶಿವನ ಸಿಂಧು, ಭಕ್ತಿಯ ಕುಳಸ್ಥಳವನಿಂಬುಗೊಂಡಾಚಾರ್ಯನು.

ದೇಹಾಭಿಮಾನಕುಲಛಲವಳಿದು, ಭಕ್ತಿ ದಾ-
ಸೋಹವಳವಟ್ಟು ಜಂಗಮಪ್ರಸಾದ ಪ್ರಾಣ-
ಗ್ರಾಹಕತೆ ನೆಲೆಗೊಂಡು, ಸರ್ವಾಂಗದೊಳಗೆ ಸರ್ವಾಚಾರ ಲೀಯವಾಗಿ
ಸೋಹ-ದಾಸೋಹವೆಂಬೆರಡಱತು, ಸಹಜನಿ-
ರ್ದೇಹಿಯಾಗಿಪ್ಪ (ಭಕ್ತರ ಭೃತ್ಯನಾಗಿ) ಶಿವ-
ಭಾವಭರಿತಾನಂದಸುಖವನೀಯೆನಗೆ ಕರುಣಾಬ್ಧಿ ಸೊಡ್ಡಳ ಲಿಂಗವೆ.

* * *

೨. ದೀಕ್ಷಾಗುರು

ಗುರು ನಮೋ ನಮೋ ಶ್ರೀಮದ್
ಗುರುವೆ ನಮೋ ನಮೋ ॥ಪಲ್ಲವಿ॥

ಅನಾದಿಮಲ ಸಂಸಾರದ
ಜನನ ಮರಣ ಭವದುಃಖವ

ನೆನೆಯಲೀಯದೆ, ಶಿವಲಿಂಗವ
ಮನದೋವರಿಯೊಳಗಿರಿಸಿದ
ವಿಷಮಸಂಸಾರದ ಕೊ–
ಗ್ಗೆ ಸಜೊಳಗಂಧಕನಂದದಿ
ದೆಸೆಗಾಣದೆ ಬಿದ್ದನನೆ–
ಬ್ಬಿಸಿ 'ಶಿವಲಿಂಗವನಿತ್ತ'

ಅಜ್ಞಾನತಿಮಿರಾಂಧಕಂಗೆ
ಶಿವಜ್ಞಾನಾಂಜನವ ನೆಚ್ಚಿ,
ಪ್ರಜ್ಞನೆನಿಸಿ, ಶಿವಲಿಂಗ 'ವ'
ಸುಜ್ಞಾನವನೊಲಿದಿತ್ತ

ಕೀಟಕನರ ನಾನಿದೆತ್ತ ?ಪಿ–
ನಾಕಿಯ ಮಹಘನವದೆತ್ತ ?
ಸೂಕ್ಷ್ಮಶುದ್ಧನನೊಲಿದಾ–
ಲೋಕಿಸಿ ಪರಮಾರ್ಥವಿತ್ತ

ಇಡ ಕಲಿಸಿದ ವಿಭೂತಿಯ;
ತೊಡ ಕಲಿಸಿದ ರುದ್ರಾಕ್ಷಿಯ;
ಅಡಿಗಡಿಗೆ ಶ್ರೀಪಂಚಾಕ್ಷರಿ–
ಯೊಡೆಯನನರ್ಚಿಸ ಕಲಿಸಿದ

ನಾಹಮೆಂಬಜ್ಞತೆಯನು
ಕೋಹಮೆಂಬ ಮಱವೆಯನು
ಸೋಹಮೆಂದೆನಿಸದೆ ದಾ–
ಸೋಹಮೆಂದೆನ ಕಲಿಸಿದ

ತ್ವಾ ದತ್ತೇಭಿ ಎಂಬ ಶ್ರುತಿಯ ಸಂ–
ಪಾದಿತ ಶಿವಲಿಂಗದಲ್ಲಿ

ಪಾದೋದಕಪ್ರಸಾದವ-
ನಾದರದಿಂದುಣ ಕಲಿಸಿದ

ಭೂತಗ್ರಾಮದೊಳ* ನುಶ್ರುತ
ಯಾ ತೇ ರುದ್ರ ನೆಂಬ ಶ್ರುತಿಯ
ನೀತಿವಿಡಿದು, ಲಿಂಗಪರಂ-
ಜ್ಯೋತಿಯ ಬೆಳಗಿನೊಳಿರಿಸಿದ

ಅಯಂ ಮೇ ಹಸ್ತೋ ಭಗವಾನ್
ಅಯಂ ಮೇ ಭಗವತ್ತರಃ
ಅಯಂ ಮೇ ವಿಶ್ವಭೇಷಜ ಎಂಬ
ಸ್ವಯರೂಪನ ಮಾಡಿ ತೋಱಿದ
ನಾರುದ್ರೋ ಸಂಸ್ಮರೇದ್ರುದ್ರಂ
ನಾರುದ್ರೋ ರುದ್ರಮರ್ಚಯೇತ್
ನಾರುದ್ರೋರುದ್ರಾತ್ಮ ನೆಂಬೀ
ಭೂರುದ್ರನ ಮಾಡಿ ತೋಱಿದ

ರುದ್ರಾತ್ಮಾನೋ ರುದ್ರಪರೋ
ರುದ್ರಾಂಶೋ ರುದ್ರಭಾವಿತ-
ಸದ್ರೂಪಾಕಾರ ಚಿದ್ರೂಪ
ವೀರಸೊಡ್ಡಳ ಲಿಂಗವೆ.

* * *

೩. ಧರ್ಮಾಚಾರ

ಸತ್ಯಸದಾಚಾರದಲ್ಲಿ ನಡೆವುದು,
ಮಿಥ್ಯೆ ವಂಚನೆಯನರಱಿಯದೆ.
ಚಿತ್ತದಲ್ಲಿ ನಿರ್ಮಲನಾಗಿಪ್ಪಡೆ
ಮುಕ್ತಿ ಬೇಱುಂಟೆ ಹೇಳಾ ?

ಸರ್ವಜೀವಂಗಳ ಹಿಂಸೆಯ ಮಾಣ್ಬುದು;
ಒರ್ವರನು ಕೆಡೆನುಡಿಯದೆ.
ವ್ಯರ್ಥಸಂಸಾರದನಿತ್ಯವನಜಿದು
ತತ್ತ್ವವಿವೇಕದಿ ನಡೆವುದು.

ಅನ್ಯರನು ಕೆಡೆನುಡಿಯದೆ,
ತನ್ನ ತಾ ನಿರ್ಬಂಧಿಸದೆ,
ತನುಮನದಲ್ಲಿ ಕಪಟವಿಲ್ಲದೆ
ಇರಬಲ್ಲಡಾತನೆ ಹಿರಿಯನು.

ನಿಂದಿಸಬೇಡ, ಸ್ತುತಿಯಿಸಬೇಡ;
ಬಂಧಿಸಬೇಡ: ಮನದಲ್ಲಿ
ಒಂದಲ್ಲದೆರಡನರಜಿಯದಿರ್ದಡೆ
ಮುಂದಣ ಮುಕುತಿ ತನ್ನಲ್ಲಿ.

ಸಮತೆ ಶಾಂತಿ ಸದುಗುಣಿಯಾಗಿ
ಕ್ರಮವನಜಿದು, ತನಗೆ ತನ್ನ ಮನ–
ಕೆ ಮನ ಮೆಚ್ಚಿ ನಡೆದಡೆ
ಶಿವನು ತನ್ನಲ್ಲಿಯೇ ನೆಲಸಿಪ್ಪನು.

ತಾನಾರಿಗು ಮುನಿಯದೆ,
ತನ್ನನೊಬ್ಬರು ನಿಂದಿಸಿದರೆನ್ನದೆ
ಸಮಾಧಾನಿಯಾಗಿಪ್ಪ ಶರಣನ
ವೀರಸೊಡ್ಡಳನಗಲದಿಪ್ಪನು.

■■

ಗ್ರಂಥ ಋಣ

೧. ಸಮಗ್ರ ವಚನ ಸಂಪುಟ – ಪ್ರಧಾನ ಸಂಪಾದಕರು,
ಡಾ. ಎಂ. ಎಂ. ಕಲಬುರ್ಗಿ

೨. ಭೀಮಕವಿಯ, ಬಸವಪುರಾಣ – ಸಂಪಾದಕರು,
ಡಾ. ಆರ್.ಸಿ. ಹಿರೇಮಠ

೩. ಶಿವದಾಸ ಗೀತಾಂಜಲಿ (ಬಸವಾದಿ ಪ್ರಮಥರ ಹಾಡುಗಳು)
– ಡಾ. ಎಲ್ ಬಸವರಾಜು

೪. ಶೂನ್ಯ ಸಂಪಾದನೆಯ, ಪರಾಮರ್ಶೆ
– ಪ್ರೊ.ಸಂ.ಶಿ. ಭೂಸನೂರಮಠ

೫. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ (ವಚನ ಸಾಹಿತ್ಯ–೪)
– ಸಂ. ಡಾ. ವಿ.ಎಸ್. ಮಾಳಿ

೬. ಒಲಿದಂತೆ ಹಾಡುವೆ (ಬಸವಾದಿ ಶರಣರ ಕಾವ್ಯಮೀಮಾಂಸೆ)
– ಡಾ. ಎಸ್.ಎಂ.ಹಿರೇಮಠ

೭. ವಚನ ಚಿಂತನಮಾಲೆ – ಸೊಡ್ಡಳ ಬಾಚರಸ
– ಡಾ. ಪ್ರೀತಿ ಶುಭಚಂದ್ರ

೮. ಬಸವೇಶ್ವರರ ಸಮಕಾಲೀನರು – ಬಸವ ಸಮಿತಿ ಬೆಂಗಳೂರು

೯. ಕನ್ನಡ ಜನಪದ ಗೀತೆಗಳು – ಡಾ. ಬಿ.ಎಸ್.ಗದ್ದಗಿಮಠ

೧೦. ಶರಣ ಚರಿತಾಮೃತ – ಸಿದ್ದಯ್ಯ ಪುರಾಣಿಕ

೧೧. ಕಾಯಕ ಪರಿಣಾಮಿ – ಪ್ರಧಾನ ಸಂಪಾದಕರು:
ಶಾಂತರಸ ರಾಯಚೂರು
(ಚೆನ್ನಬಸವ ಪಟ್ಟದ್ದೇವರು ಭಾಲ್ಕಿ ಗೌರವ ಗ್ರಂಥ)
– ಚೆನ್ನಬಸವಪ್ಪ ಬೆಟ್ಟದೂರು.

■■

ಶ್ರೀಮತಿ ಜಯಶ್ರೀ ಸುಕಾಲೆ : ಬಸವ ಪ್ರಕಾಶ ನಿಲಯ
ಮನೆ ನಂ. ೮-೧೧-೫೮/೧
ರೋಡ್ ನಂ. ೧, ಶರಣನಗರ
ಬೀದರ
ದೂರವಾಣಿ : ೮೦೭೩೦೧೫೧೧೦/
ಮೊಬೈಲ್: ೯೪೪೮೧೬೩೩೪೬೩

■■

ಪ್ರಸಾರಾಂಗ ಲಿಂಗಾಯತ ವಿಶ್ವವಿದ್ಯಾಲಯ

ಅನುಭವ ಮಂಟಪ, ಬಸವಕಲ್ಯಾಣ, ಜಿಲ್ಲೆ : ಬೀದರ

ಪ್ರಕಟಣೆಯಾದ ಮುಸ್ತಕಗಳು

೧. ಅನನ್ಯ ಅನುಭವ ಮಂಟಪ (ಸ್ಮರಣ ಸಂಚಿಕೆ) (೨೦೧೫)
- ಸಂ.ಡಾ.ಸೋಮನಾಥ ಯಾಳವಾರ

೨. ಜಗತ್ತಿನ ಪ್ರಪ್ರಥಮ ಸಂಸತ್ತು ಅನುಭವ ಮಂಟಪ (ಸ್ಮರಣ ಸಂಚಿಕೆ) (೨೦೧೬)
- ಸಂ.ಡಾ.ಸೋಮನಾಥ ಯಾಳವಾರ

೩. ವ್ಯೋಮಮೂರುತಿ ಅಲ್ಲಮಪ್ರಭುದೇವರು (೨೦೧೬) ೦೧
- ಲೇ.ಡಾ.ಪ್ರದೀಪಕುಮಾರ ಹೆಬ್ರಿ

೪. ಧರ್ಮಪಿತ ವಿಶ್ವಗುರು ಬಸವಣ್ಣ (೨೦೧೬) ೦೨
- ಲೇ.ಪ್ರೊ.ಸಿದ್ಧಣ್ಣ ಲಂಗೋಟಿ

೫. ವಿಚಾರಪತ್ನಿ ನೀಲಮ್ಮ (೨೦೧೬) ೦೩
- ಲೇ.ಡಾ.ಕಲ್ಯಾಣಮ್ಮ.ಸಿ.ಲಂಗೋಟಿ

೬. ಮಹಾಜ್ಞಾನಿ ಚೆನ್ನಬಸವಣ್ಣನವರು (೨೦೧೬) ೦೪
- ಲೇ.ಡಾ.ಸೋಮನಾಥ ಯಾಳವಾರ

೭. ವೀರವೈರಾಗ್ಯನಿಧಿ ಅಕ್ಕಮಹಾದೇವಿ (೨೦೧೬) ೦೫
- ಲೇ.ವಿಜಯಲಕ್ಷ್ಮೀ ಕೌಟಗೆ

೮. ಲಿಂಗಾಯತಂ ಭೋ ಸ್ವತಂತ್ರಶೀಲ (ಸ್ಮರಣ ಸಂಚಿಕೆ)(೨೦೧೭)
- ಸಂ.ಡಾ.ಸೋಮನಾಥ ಯಾಳವಾರ

೯. ಶರಣ ಹಡಪದ ಅಪ್ಪಣ್ಣ (೨೦೧೭) ೦೬
- ಲೇ.ಡಾ.ಆರ್.ಬಿ.ಚಿಲುಮಿ

೧೦. ಶರಣೆ ಸತ್ಯಕ್ಕ (೨೦೧೭) ೦೭
- ಲೇ.ಪ್ರೊ.ಬಾಲಚಂದ್ರ ಜಯಶೆಟ್ಟಿ

■■

ಶಿವಜ್ಞಾನಿ ಶರಣ ಸೊಡ್ಡಳ ಬಾಚರಸರು







ಎಮ್ಮವರಿಗೆ ಸಾವಿಲ್ಲ. ಎಮ್ಮವರು ಸಾವನಜಿಯರು.
ಸಾವೆಂಬುದು ಸಯವಲ್ಲ.
ಲಿಂಗದಲ್ಲಿ ಉದಯವಾದ ನಿಜೈಕ್ಯರಿಗೆ
ಆ ಲಿಂಗದಲ್ಲಿಯಲ್ಲದೆ ಬೇರೆ ಮತ್ತೊಂದೆಡೆಯಿಲ್ಲ.
ಕೂಡಲಸಂಗಮದೇವರ ಶರಣ ಸೊಡ್ಡಳ ಬಾಚರಸರು
ನಿಜಲಿಂಗದ ಒಡಲೊಳಗೆ ಬಗಿದು ಹೊಕ್ಕಡೆ,
ಉಪಮಿಸಬಲ್ಲವರ ಕಾಣೆನು.

– ಬಸವಣ್ಣನವರು

ಪ್ರಕಾಶಕರು
ಪ್ರಸಾರಾಂಗ ಲಿಂಗಾಯತ ವಿಶ್ವವಿದ್ಯಾಲಯ
ಅನುಭವಮಂಟಪ ಬಸವಕಲ್ಯಾಣ, ಜಿಲ್ಲೆ. ಬೀದರ